ಶ್ರೀ ನಾರಾಯಣಪಂಡಿತಾಚಾರ್ಯ ವಿರಚಿತಃ

ಮಧ್ವಾಮೃತ ಮಹಾರ್ಣವಃ

(ಕನ್ನಡ ಅನುವಾದ ಸಮೇತ)



ಅನುವಾದ :

ಪ್ರೊ। ವ್ಯಾಸನಕೆರೆ ಪ್ರಭಂಜನಾಚಾರ್ಯ, ಎಂ. ಎ.,

ಐತರೇಯ ಪ್ರಕಾಶನ ವ್ಯಾಸನಕೆರೆ

ಪಾಜಕ, ನಂ. 6, 14ನೇ ಮುಖ್ಯರಸ್ತೆ

ಬನಶಂಕರಿ ಮೊದಲ ಹಂತ, ಬೆಂಗಳೂರು - 560 050

ಶ್ರೀ ಐತರೇಯ ಪ್ರಕಾಶನ, ವ್ಯಾಸನಕೆರೆ

ಪ್ರಧಾನ ಮಹಾಸಂಪೋಷಕರು :

ಶ್ರೀ ವಿ. ಕೆ. ರಾಮರಾಯರು, ವ್ಯಾಸನಕೆರೆ
ಡಾ॥ ವಿ. ಎಸ್. ರಾವ್, ಎಂ. ಡಿ. ಎಫ್. ಆರ್. ಸಿ. ಎಸ್. (ಸಿ)
ಶ್ರೀ ವಿ. ಸತ್ಯಬೋಧರಾವ್, ವ್ಯಾಸನಕೆರೆ
ಶ್ರೀ ವಿ. ಪ್ರಭಂಜನಾಚಾರ್ಯ, ವ್ಯಾಸನಕೆರೆ

ಮಹಾಸಂಪೋಷಕರು :

ಶ್ರೀ ಸಿ. ಗೋಪೀನಾಥ್, ಬೆಂಗಳೂರು
ಶ್ರೀ ಎಂ. ಕೆ. ರಾಘವೇಂದ್ರರಾವ್, ಬೆಂಗಳೂರು
ಶ್ರೀ ಪಿ. ಎಸ್. ಹರಿರಾವ್, ಬೆಂಗಳೂರು
ಶ್ರೀ ಡಿ. ಕೆ. ರಾಘವೇಂದ್ರಪ್ರಸಾದ್, ಬೆಂಗಳೂರು
ಶ್ರೀ ವಿ. ಮಾರುತಿರಾವ್, ಬೆಂಗಳೂರು
ಶ್ರೀ ಕೆ. ಪ್ರಾಣೇಶರಾವ್, ಬೆಂಗಳೂರು
ಶ್ರೀ ಕೆ. ಎಲ್. ಶ್ರೀನಿವಾಸಮೂರ್ತಿ, ಬೆಂಗಳೂರು
ಶ್ರೀ ಆರ್. ಹೆಚ್. ಮಠದ್, ಬೆಳಗಾಂ

ಮಹಾಪೋಷಕರು :

ಶ್ರೀ ವಸಂತಕುಮಾರ್ ಪರಿಗಿ, ಹೈದರಾಬಾದ್
ಶ್ರೀ ಟಿ. ಕೆ. ನಾರಾಯಣಮೂರ್ತಿ, ಬೆಂಗಳೂರು
ಶ್ರೀ ಮತಿ ಟಿ. ಕೆ. ಮಧುರಾಬಾಯಿ, ಬೆಂಗಳೂರು
ಶ್ರೀ ಮಾಗಡಿ ರಾಘವೇಂದ್ರರಾವ್, ಬೆಂಗಳೂರು
ಶ್ರೀ ಎಸ್. ಎ. ಎನ್. ರಂಗನಾಥಾಚಾರ್, ಮದ್ರಾಸ್
ಶ್ರೀ ಎಂ. ವಿ. ಕಲಘಟಗಿ, ಬೆಂಗಳೂರು
ಶ್ರೀ ಜಿ. ಶೇಷಗಿರಿರಾವ್, ಬೆಂಗಳೂರು
ಶ್ರೀ ವಿ. ಎಚ್. ಪಾಂಡುರಂಗಿ, ಮೈಸೂರು
ಶ್ರೀ ಎಸ್. ಆರ್. ಪಾಂಡುರಂಗಿ, ಬೆಂಗಳೂರು
ಶ್ರೀ ಬಿ. ಜಿ. ರಾಜಾರಾವ್, ಬೆಂಗಳೂರು
ಶ್ರೀ ಎ. ಬಿ. ಶ್ಯಾಮಾಚಾರ್, ಬೆಂಗಳೂರು
ಶ್ರೀ ಎ. ಕೆ. ರಾಮಚಂದ್ರರಾವ್, ಹೊಸಪೇಟೆ
ಶ್ರೀ ಬಿ. ವಿ. ರಾಘವೇಂದ್ರರಾವ್, ಬೆಂಗಳೂರು
ಶ್ರೀ ವಿ. ಶ್ರೀಧರ, ವ್ಯಾಸನಕೆರೆ
ಶ್ರೀ ವಿ. ಮನೋಹರರಾವ್, ವ್ಯಾಸನಕೆರೆ
ಶ್ರೀ ಎಸ್. ಆರ್. ಸೂರ್ಯನಾರಾಯಣರಾವ್, ಚಿಕ್ಕಬಳ್ಳಾಪುರ
ಶ್ರೀ ಯು. ಡಿ. ನಾಗರಾಜ, ಬೆಂಗಳೂರು

(ರಕ್ಷಾಪತ್ರ 3 ನೋಡಿ)

ಶ್ರೀ ನಾರಾಯಣಪಂಡಿತಾಚಾರ್ಯ ವಿರಚಿತಃ

ಮಧ್ವಾಮೃತ ಮಹಾರ್ಣವಃ

(ಕನ್ನಡ ಅನುವಾದ ಸಮೇತ)

ಅನುವಾದ :

ಪ್ರೊ। ವ್ಯಾಸನಕೆರೆ ಪ್ರಭಂಜನಾಚಾರ್ಯ, ಎಂ. ಎ

ಐತರೇಯ ಪ್ರಕಾಶನ ವ್ಯಾಸನಕೆರೆ
ಪಾಜಕ, ನಂ. 6, 14ನೇ ಮುಖ್ಯರಸ್ತೆ
ಬನಶಂಕರಿ ಮೊದಲ ಹಂತ, ಬೆಂಗಳೂರು–560 050.

MADHVAMRUTAMAHARNAVA—Edited with Kannada rendering by Prof. Vyasanakere Prabhanjanacharya M A., and published by Aitareya Prakashana Vyasanakere, Pajaka, No. 6, 14th Main B.S.K. I Stage Bangalore-560 050.

First Edition : 1992

Second Edition : 1992

Price : Rs. 2-50

ಶ್ರೀ ಜಯತೀರ್ಥ ಬೃಂದಾವನ ಸನ್ನಿಧಾನ (ಉತ್ತರಾದಿ ಮಠ) ಬೆಂಗಳೂರಿನಲ್ಲಿ
ಶ್ರೀ ಪಂ. ವ್ಯಾಸನಕೆರೆ ಪ್ರಭಂಜನಾಚಾರ್ಯರಿಂದ ನಡೆದ
'ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ' ಗ್ರಂಥ ಪಾಠದ
ಮಂಗಲಮಹೋತ್ಸವ (8-3-1992) ಸ್ಮಾರಕವಾಗಿ
ಪ್ರಕಾಶಿತವಾದುದು.

Printed By :

NAYAK PRINTERS,
4 Neelpothaiah Lane,
O. T. C. Road Cross, Cottonpet
BANGALORE - 560 053.

ಮುನ್ನುಡಿ

'ಮಧ್ವಾಮೃತ ಮಹಾರ್ಣವ'ವು ಅದರ ಹೆಸರಿನಿಂದಲೇ ಸ್ಪಷ್ಟಪಡುವಂತೆ ಶ್ರೀಮನ್ಮಧ್ವಾಚಾರ್ಯರ 'ಕೃಷ್ಣಾಮೃತಮಹಾರ್ಣವ' ಗ್ರಂಥದ ಛಾಯೆಯಲ್ಲಿ ರಚಿತವಾದ ಕೃತಿ. ಕೃಷ್ಣಾಮೃತಮಹಾರ್ಣವವು ಶ್ರೀ ಕೃಷ್ಣನ ಸರ್ವಪಾರಮ್ಯವನ್ನು ಪ್ರತಿಪಾದಿಸುತ್ತ ಆತನ ಸ್ಮರಣ, ವಂದನ, ಅರ್ಚನ, ಮೊದಲಾದವುಗಳನ್ನು ಸಂಸಾರ ಮೋಚಕವಾದ ತತ್ತ್ವಜ್ಞಾನದ ಸಾಧನವನ್ನಾಗಿ ನಿರೂಪಿಸುವ ಅಪೂರ್ವಕೃತಿ. ಅದು ಮೂಲತಃ ಅವರೇ ತಿಳಿಸುವಂತೆ ಅನೇಕ ಪುರಾಣಗಳಲ್ಲಿನ ವಿವಿಧ ವಾಕ್ಯಗಳ ಸಂಕಲನ.

ಅದರಂತೆ ಈ 'ಮಧ್ವಾಮೃತಮಹಾರ್ಣವ'ವು ಜೀವರಲ್ಲಿ ಶ್ರೀವಾಯುದೇವರ ಪಾರಮ್ಯವನ್ನು ಪ್ರತಿಪಾದಿಸುವ ಅಪೂರ್ವಕೃತಿ. ಶ್ರೀಮಧ್ವರ ಸ್ಮರಣೆ, ವಂದನ, ಪೂಜಾ ಮೊದಲಾದವುಗಳ ಮಹತ್ತ್ವದೊಂದಿಗೆ ಅನೇಕ ತೆರನಾದ ವೈಷ್ಣವದೀಕ್ಷೆಯನ್ನು ನಿರೂಪಿಸಿರುವುದು ಈ ಕೃತಿಯ ವೈಶಿಷ್ಟ್ಯ. ಯಾವುದೇ ಜಪ, ತಪ, ಪೂಜಾದಿಗಳಿಗಿಂತಲೂ ಶ್ರೀಮಧ್ವರಲ್ಲಿ ಅವರ ಜೀವೋತ್ತಮತ್ವ ಜ್ಞಾನ ಪೂರ್ವಕವಾಗಿ ಮಾಡುವ ನಿರ್ಮಲ ಭಕ್ತಿಯು ಶ್ರೀಹರಿಪ್ರಸಾದಕ್ಕೆ ಪರಮ ಸಾಧನ ಎಂಬುದು ಇದರ ಸಾರ.

'ಕೃಷ್ಣಾಮೃತಮಹಾರ್ಣವ'ದಂತೆ ಇದು ಸಹ ವಿವಿಧ ಪುರಾಣಗಳಲ್ಲಿನ ಮಧ್ವಮಾಹಾತ್ಮ್ಯಪ್ರತಿಪಾದಕವಾದ ವಾಕ್ಯಗಳ ಸಂಗ್ರಹ ಎಂಬುದು ಇದರ ಉಪಸಂಹಾರ ವಾಕ್ಯದಿಂದ ಸೂಚಿತವಾಗಿದೆ.

ಮಧ್ವಮಾಹಾತ್ಮ್ಯದೊಂದಿಗೆ ಶ್ರೀಹರಿಸರ್ವೋತ್ತಮತ್ವ, ಪಂಚಭೇದ ಜ್ಞಾನ, ದ್ವೈತತತ್ತ್ವದ ಹಿರಿಮೆ, ಮಾಯಾವಾದಾದಿ ಮತಗಳ ಅನುಪಾದೇಯತ್ವ, ದೇವತಾ ತಾರತಮ್ಯ ಜ್ಞಾನದ ಅವಶ್ಯಕತೆ ನಿತ್ಯ ಜೀವನದಲ್ಲಿ ಅವಶ್ಯ ಅನುಷ್ಠೇಯವಾದ ವಿವಿಧ ಕರ್ತವ್ಯಗಳು ಸಹ ಇದರಲ್ಲಿ ನಿರೂಪಿತವಾಗಿವೆ.

ಭಾವದಲ್ಲಿ ಮಾತ್ರವಲ್ಲದೆ ಇದರಲ್ಲಿನ ಅನೇಕ ವಾಕ್ಯಗಳು ಸಹ ಕೃಷ್ಣಾಮೃತ ಮಹಾರ್ಣವದ ವಾಕ್ಯಗಳನ್ನೇ ಹೋಲುವುದನ್ನು ಗಮನಿಸಬೇಕು ; ಇದಕ್ಕೆ ಪ್ರೇರಕವಾಗಿರಬಹುದಾದ ಕೃಷ್ಣಾಮೃತಮಹಾರ್ಣವದ ವಾಕ್ಯಗಳನ್ನು ಅಡಿ ಟಿಪ್ಪಣಿಗಳಲ್ಲಿ (ಕೃ.ಮ. ಎಂಬುದಾಗಿ) ಉಲ್ಲೇಖಿಸಲಾಗಿದೆ. ಹೆಸರಿನೊಂದಿಗೆ ರಚನಾ ಸಂವಿಧಾನದಲ್ಲೂ ಕೃಷ್ಣಾಮೃತ ಮಹಾರ್ಣವದೊಂದಿಗೆ ಈ ಕೃತಿ ಹೆಚ್ಚಿನ ಸಾಮ್ಯವನ್ನು ಹೊಂದಿದೆ.

ಶ್ರೀಕೃಷ್ಣಮಾಹಾತ್ಮ್ಯಪ್ರತಿಪಾದಕವಾದ 'ರುಗ್ಮಿಣೀಶವಿಜಯ' ಮತ್ತು ವಾಯುಮಹಾತ್ಮ್ಯ ಪ್ರತಿಪಾದಕವಾದ 'ಸುಮಧ್ವವಿಜಯ'ಗಳಂತೆ, ಈ 'ಕೃಷ್ಣಾಮೃತ ಮಹಾರ್ಣವ' ಮತ್ತು 'ಮಧ್ವಾಮೃತಮಹಾರ್ಣವ'ಗಳು ಗಮನಾರ್ಹವೆನ್ನಿಸುತ್ತವೆ. ಇವುಗಳ ಅಧ್ಯಯನ ಶ್ರೀಹರಿವಾಯುಗಳಲ್ಲಿ ವಿಶೇಷರೀತಿಯಲ್ಲಿ ಆದರವನ್ನು ಹೊಂದಲು ನೆರವಾಗುವುದರಲ್ಲಿ ಸಂಶಯವಿಲ್ಲ.

ಸುಮಧ್ವವಿಜಯವನ್ನು ಬರೆದ ಲಿಕುಚ ನಾರಾಯಣಪಂಡಿತಾಚಾರ್ಯರೇ ಇದನ್ನು ಬರೆದ ಮಹನೀಯರು; ಈವರೆಗಿನ ಎಲ್ಲಾ ಪ್ರಾಚೀನ ಕೃತಿಗಳೂ, ಪರಂಪರೆಯೂ ಹಾಗೆಂದೇ ಹೇಳುತ್ತವೆ. ಸುಮಧ್ವವಿಜಯ, ಅಣುಮಧ್ವವಿಜಯ (ಪ್ರಮೇಯನವಮಾಲಿಕಾ), ಮಣಿಮಂಜರೀ ಮತ್ತು ಸುಮಧ್ವವಿಜಯಭಾವ ಪ್ರಕಾಶಿಕೆ ಎಂಬ ನಾಲ್ಕು ಅಮೌಲ್ಯ ಕೃತಿಗಳನ್ನು ಶ್ರೀಮದಾನಂದತೀರ್ಥಭಗವತ್ಪಾದರ ಬಗ್ಗೆ ಒದಗಿಸಿ ಪರಮೋಪಕಾರ ಮಾಡಿರುವ ಅವರ ರಚನೆಯೇ ಇದು ಎನ್ನಲು ಯಾವ ಅನುಪಪತ್ತಿಯೂ ಇಲ್ಲ. ಅವರ ದೇಶಕಾಲ ಕೃತಿ ಮೊದಲಾದವುಗಳ ಬಗ್ಗೆ ವಿವರ ವನ್ನು 'ಸುಮಧ್ವವಿಜಯ'ದ ಅನುವಾದದ ಮುನ್ನುಡಿಯಲ್ಲಿ ಕೊಡಲಾಗಿದೆ.

ಹಿಂದೆಮ್ಮೆ ಬೆಳಗಾಂನ ಶ್ರೀರಾಮತತ್ತ್ವಪ್ರಕಾಶ ಪ್ರೆಸ್‌ನಿಂದ ಪ್ರಕಟಿತವಾದ ಇದರ ಪ್ರತಿಯಲ್ಲಿ ಕೇವಲ 115 ಶ್ಲೋಕಗಳು ಮಾತ್ರವೇ ಇದ್ದು, ಅನೇಕ ಶ್ಲೋಕಗಳ ಪಾಠ ಸಹ ಅಶುದ್ಧವಾಗಿದೆ. ಪಕೃತ ಇದರ ಸಂಪಾದನೆಗೆ ನನ್ನ ಸಂಗ್ರಹ (ಶ್ರೀಜಯತೀರ್ಥ ಸಂಸ್ಕೃತ ಹಸ್ತಲಿಖಿತ ಗ್ರಂಥಾಲಯ ವ್ಯಾಸನಕೆರೆ)ದಲ್ಲಿನ ಎರಡು ಸಾಕಷ್ಟು ಶುದ್ಧವಾದ ಹಸ್ತಪ್ರತಿಗಳನ್ನು ಮುಖ್ಯವಾಗಿ ಆಧರಿಸಿದ್ದೇನೆ.

ಬೆಂಗಳೂರಿನ ಶ್ರೀ ಎಂ ಆರ್. ರಂಗನಾಥ್ ನಿವೃತ್ತ ಪ್ರಾಂಶುಪಾಲರು, ಆಚಾರ್ಯ ಪಾಠಶಾಲಾ ಕಾಮರ್ಸ್ ಕಾಲೇಜು ಅವರು ಇದರ ಅನುವಾದದ ಮೊದಲ ಆವೃತ್ತಿಯನ್ನು ಪ್ರಕಟಿಸಿದ್ದರು. ಇದೀಗ ಇದರ ದ್ವಿತೀಯ ಆವೃತ್ತಿಯನ್ನು ವ್ಯಾಸನಕೆರೆಯ ಐತರೇಯ ಪ್ರಕಾಶನವು ಪ್ರಕಟಿಸುತ್ತಿದೆ. ಅದಕ್ಕೂ ಮುದ್ರಣ ಕಾರ್ಯವನ್ನು ಸಕಾಲದಲ್ಲಿ ಮಾಡಿಕೊಟ್ಟಿರುವ ಬೆಂಗಳೂರಿನ ನಾಯಕ್ ಪ್ರಿಂಟರ್ಸ್ ಅವರಿಗೂ ನನ್ನ ಕೃತಜ್ಞತೆಗಳು.

ವ್ಯಾಸನಕೆರೆ ಪ್ರಭಂಜನಾಚಾರ್ಯ
ಪಾಜಕ, ನಂ. 6, 14ನೇ ಮುಖ್ಯರಸ್ತೆ,
ಬನಶಂಕರಿ ಮೊದಲಹಂತ

ಬೆಂಗಳೂರು 8.3.1992
(ಪ್ರಜಾಪತಿ ಸಂ। ಫಾಲ್ಗುಣಶುಕ್ಲ ಚತುರ್ಥೀ)

ಶ್ರೀ ನಾರಾಯಣಪಂಡಿತಾಚಾರ್ಯ ವಿರಚಿತಃ

ಮಧ್ವಾಮೃತಮಹಾರ್ಣವಃ

॥ ಶ್ರೀಮದ್ವಸುಮದ್ಧೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀ ಲಕ್ಷ್ಮೀಹಯಗ್ರೀವಾಯ ನಮಃ॥

ಇಂದೀವರದಲಶ್ಯಾಮಮಿಂದಿರಾನಂದವರ್ಧನಮ್ ।
ವಂದೇ ನಂದಸುತಂ ಸಾಂದ್ರಾನಂದಸುಂದರವಿಗ್ರಹಮ್ ॥ ೧ ॥

ಕನ್ನೈದಿಲೆಯಂತೆ ಕಪ್ಪಾಗಿರುವ, ಇಂದಿರಾದೇವಿಗೆ ಆನಂದವನ್ನು ಉಕ್ಕಿಸುವ ಆನಂದಪೂರ್ಣ ಸುಂದರಮೂರ್ತಿಯಾಗಿರುವ ನಂದಸುತ ಶ್ರೀಕೃಷ್ಣನನ್ನು ವಂದಿಸುವೆನು.

[1]ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಮಧ್ವಾಮೃತಮಹಾರ್ಣವಮ್ ॥ ೨ ॥

ತಾಪತ್ರಯದಿಂದ ಬೆಂದಿರುವ ಜಗತ್ತಿಗೆ ಅದರ ಉಪಶಮನಕ್ಕೆಂದು 'ಮಧ್ವಾಮೃತಮಹಾರ್ಣವ'ವನ್ನು ತಿಳಿಸುತ್ತಿರುವೆನು.

ಚಂಡಾಲೋಽಪಿ ನ ಚಂಡಾಲೋ ಘಾತಕೋಽಪಿ ನ ಘಾತಕಃ ।
ಅಚಕ್ರಧಾರೀ ಯೋ ವಿಪ್ರಃ ಸ ಚಂಡಾಲ ಉದಾಹೃತಃ ॥ ೩ ॥

ಚಂಡಾಲನು ಚಂಡಾಲನಲ್ಲ ; ಘಾತಕನು ಘಾತಕನಲ್ಲ ;[2](ವಿಹಿತಗುರುಗಳಿಂದ) ತಪ್ತಚಕ್ರವನ್ನು ಧರಿಸದ ವಿಪ್ರನು ಮಾತ್ರ ಚಂಡಾಲನೇ ಸರಿ.

ಗುರುದ್ರೋಹೀ ನ ಚ ದ್ರೋಹೀ ಪಿತೃದ್ರೋಹೀ ನ ಚೈವ ಚ ।
ಅತಪ್ತದೇಹವಾನ್ ವಿಪ್ರೋ ಗುರುದ್ರೋಹೀತಿ ಚೋಚ್ಯತೇ ॥ ೪ ॥

ಗುರುದ್ರೋಹಿಯು ಗುರುದ್ರೋಹಿಯಲ್ಲ ; ಪಿತೃದ್ರೋಹಿಯುಪಿತೃದ್ರೋಹಿಯೂ ಅಲ್ಲ ; ವಿಹಿತರೀತಿಯಲ್ಲಿ ವೈಷ್ಣವ ಗುರುಗಳಿಂದ ತಪ್ತಚಕ್ರಧರಿಸದ ವಿಪ್ರನು ಮಾತ್ರ ಗುರುದ್ರೋಹಿಯೇ ಸರಿ ; (ಅವನು ಪಿತೃದ್ರೋಹಿಯೂ ಹೌದು).

---

1 ತಾಪತ್ರಯೇಣ ಸಂತಪ್ತಂ ಯದೇತದಖಿಲಂ ಜಗತ್ ।
ವಕ್ಷ್ಯಾಮಿ ಶಾಂತಯೇ ತಸ್ಯ ಕೃಷ್ಣಾಮೃತಮಹಾರ್ಣವಮ್ ॥ —(ಕೃ.ಮ.)

2 'ತಪ್ತಮುದ್ರಾಧಾರಣ' ಎಂಬ ಐತರೇಯಪ್ರಕಾಶನದ ಕೃತಿಯಲ್ಲಿ ಈ ಬಗ್ಗೆ ವಿವರಗಳನ್ನು ಸಂಗ್ರಹಿಸಿ ಕೊಡಲಾಗಿದೆ.

ಸುರಾಪಾನಿ(ಯಿ)ೀ ನ ಪಾನಿ(ಯಿ)ೀ ಸ್ಯಾತ್ ಸ್ವರ್ಣಸ್ತೇಯೀ ತಥೈವ ಚ |
ಅಚಕ್ರಧಾರೀ ಯೋ ವಿಪ್ರಃ ಸುರಾಪಾನಿ(ಯಿ)ೀತಿ ಚೋಚ್ಯತೇ || ೫ ||

ಸುರಾಪಾನಿಯು ಸುರಾಪಾನಿಯಲ್ಲ ; ಚಿನ್ನ ಕದ್ದವನೂ ಕಳ್ಳನಲ್ಲ ; (ತಪ್ತ) ಚಕ್ರಧರಿಸದ ವಿಪ್ರನು ಮಾತ್ರ ಸುರಾಪಾನಿಯೇ ಸರಿ; (ಅವನು ಸ್ವರ್ಣಸ್ತೇಯಿಯೂ ಹೌದು). (ತಪ್ತಮುದ್ರೆ ಧರಿಸದಿರುವುದು ಪಿತೃದ್ರೋಹ, ಗುರುದ್ರೋಹ, ಸುರಾಪಾನಾದಿಗಳಿಗಿಂತ ಹೆಚ್ಚಿನ ದೋಷ ಎಂದು ಭಾವ).

ಮಾತೃಗಾಮೀ ನ ಗಾಮೀ ಸ್ಯಾತ್ ಸ್ವಸೃಗಾಮೀ ನ ದೋಷಭಾಕ್ |
ಅಚಕ್ರಧಾರೀ ಯೋ ವಿಪ್ರೋ ಮಾತೃಗಾಮೀ ಸ ಉಚ್ಯತೇ || ೬ ||

ಮಾತೃಗಾಮಿ ಮಾತೃಗಾಮಿಯಲ್ಲ ; ಸ್ವಸೃಗಾಮಿಯು ಸ್ವಸೃಗಾಮಿಯೂ ದೋಷಿಯಲ್ಲ; (ಹಿಂದೆ ಹೇಳಿದಂತೆ ಯೋಗ್ಯ ಗುರುಗಳಿಂದ ತಪ್ತ) ಚಕ್ರಧರಿಸದವನು ಮಾತ್ರ ಮಾತೃಗಾಮಿಯೂ ಹಾಗು, ಸ್ವಸೃಗಾಮಿಯೂ ಹೌದು.

ನಿತ್ಯಂ ಚಕ್ರಾಂಕಿತಂ ನೈವ ಶರೀರಂ ಯಸ್ಯ ದೇಹಿನಃ |
ವಿಷ್ಠಾಕೃಮಿ(ವಿಷ್ಠಾ)ಸಮಂ ಜ್ಞೇಯಂ ಶರೀರಂ ತಸ್ಯ ವೈ ಧ್ರುವಮ್ ೭

ಸುದರ್ಶನದಿಂದ ನಿತ್ಯವೂ ಅಂಕಿತವಾಗದ ದೇಹವನ್ನು ಮಲದ ಮಧ್ಯದ ಕ್ರಿಮಿ ಎಂದೇ ತಿಳಿಯಬೇಕು.

ವಿನಾ ಯಜ್ಞೋಪವಿತೇನ ವಿನಾ ಚಕ್ರಸ್ಯ ಧಾರಣಾತ್ |
ವರಂ ಹತ್ಯಾ ಸುರಾಪಾನಂ ಭಸ್ಮನಸ್ತು ವಿಧಾರಣಾತ್ || ೮ ||

ಯಜ್ಞೋಪವಿತವನ್ನು ಧರಿಸದಿರುವುದು, (ತಪ್ತ)ಚಕ್ರವನ್ನು ಹೊಂದದಿರುವುದು ಮತ್ತು ಭಸ್ಮ ಧರಿಸುವುದು ಇವುಗಳಿಗಿಂತ ಹತ್ಯೆ ಮತ್ತು ಮದ್ಯಪಾನಗಳು ಮೇಲು.

ಅಚಕ್ರಧಾರೀ ಯೋ ವಿಪ್ರೋ ವಾಯುದೇವಂ ನ ವಿಂದತಿ |
ಅವಲೋಕ್ಯ ಮುಖಂ ತಸ್ಯ ಸಚೈಲಂ ಸ್ನಾನಮಾಚರೇತ್ || ೯ ||

ಹೆಸರಿಗೆ ಬ್ರಾಹ್ಮಣ ; ತಪ್ತಚಕ್ರದ ಧಾರಣೆಯೂ ಇಲ್ಲ; ವಾಯುದೇವರ ಬಗ್ಗೆ ಅರಿವೂ ಇಲ್ಲ : ಅಂತಹವನ ಮುಖ ಕಂಡಲ್ಲಿ ಉಟ್ಟವಸ್ತ್ರದೊಂದಿಗೇ ಮಿಂದು ಶುದ್ಧನಾಗಬೇಕು

ಅಚಕ್ರಧಾರೀ ಯೋ ವಿಪ್ರೋ ಮಧ್ವಶಾಸ್ತ್ರಂ ನ ವಿಂದತಿ |
ತಸ್ಯ ಕಂಠೇ ಶಿಲಾಂ ಬದ್ಧ್ವಾ ಸಿಂಧುಮಧ್ಯೇ ವಿನಿಕ್ಷಿಪೇತ್ | || ೧೦ ||

ತಪ್ತಮುದ್ರಾಧಾರಣೆ ಇಲ್ಲ ; ಮಧ್ವಶಾಸ್ತ್ರದ ಅಧ್ಯಯನವೂ ಇಲ್ಲ; ಅಂತಹವನ ಕೊರಳಿಗೆ ಕಲ್ಲನ್ನು ಕಟ್ಟಿ ಸಾಗರದ ಮಧ್ಯೆ ಎಸೆದು ಬಿಡಬೇಕು.

ಕದಾಚಿತ್ ತಪ್ತದೇಹಸ್ತು ಮಧ್ವಶಾಸ್ತ್ರಂ ವಿದೂಷ್ಯತಿ ।
ಸಂಸಾರೇ ಕ್ಲಿಶ್ಯಮಾನಸ್ತು ತಮೋ ವಿಶತಿ ಸ ಧ್ರುವಮ್ ॥ ೧೧ ॥

ತಪ್ತಮುದ್ರಾಧಾರಣೆ ಆಗಿದ್ದರೂ ಮಧ್ವಶಾಸ್ತ್ರವನ್ನು ನಿಂದಿಸುವವನು; ಸಂಸಾರದಲ್ಲಿ ಕ್ಲೇಶಪಡುವನು ; ಅನಂತರ ನಿಶ್ಚಯವಾಗಿ ತಮಸ್ಸಿಗೂ ತೆರಳುವನು.

ಮಧ್ವಸ್ಯ ಲಾಂಛನಂ ಹಿತ್ವಾ ಮಾಯಿಶಾಸ್ತ್ರಂ ಭಜೇದ್ಯದಿ ।
ದುಃಖಾತ್ಮಕಂ ತಸ್ಯ ತಮೋ ಭವತ್ಯೇವ ನ ಸಂಶಯಃ ॥ ೧೨ ॥

ಮಧ್ವಲಾಂಛನವನ್ನು ತೊರೆದು ಮಾಯಾವಾದವನ್ನು ಆಶ್ರಯಿಸಿದಲ್ಲಿ ದುಃಖ ರೂಪವಾದ ತಮಸ್ಸು ತಪ್ಪುವುದೇ ಇಲ್ಲ.

ದೂಷಯಿತ್ವಾ ಮಾಯಿಶಾಸ್ತ್ರಂ ಮಧ್ವಶಾಸ್ತ್ರಂ ಭಜೇದ್ಯದಿ ।
ಮುಕ್ತಿಃ ಕರತಲೇ ತಸ್ಯ ನಾತ್ರ ಕಾರ್ಯಾ ವಿಚಾರಣಾ ॥ ೧೩ ॥

ಮಾಯಾವಾದವನ್ನು ತ್ಯಜಿಸಿ, ಮಧ್ವಶಾಸ್ತ್ರವನ್ನು ತಿಳಿದವನಿಗೆ ಮುಕ್ತಿ ಅಂಗೈಯಲ್ಲೇ ನೆಲೆಸುವುದು ; ಈ ಬಗ್ಗೆ ಸಂಶಯ ಬೇಡ.

ಯೋ ಮಧ್ವಶಾಸ್ತ್ರಂ ಸಮುಪೇಕ್ಷ್ಯ ದುಷ್ಟೋ
ಜೀವಸ್ಯ ಚೇಶಸ್ಯ ಚ ಸಾಮ್ಯಮೇವ ।
ಮುಕ್ತೌ ವದೇಚ್ಛಾಸ್ತ್ರಮಥರ್ಮದುಷ್ಟಂ
ಜ್ಞಾತ್ವಾ ತು ಭಾವಂ ಪ್ರವಿಶೇತ್ ತಮೋಽಂಧಮ್ ॥ ೧೪ ॥

ಮಧ್ವಶಾಸ್ತ್ರವನ್ನು ಕಡೆಗಣಿಸಿ ಮುಕ್ತಿಯಲ್ಲಿ ಜೀವ ಮತ್ತು ಈಶರಿಗೆ ಸಾಮ್ಯ ಹೇಳುವವನಿಗೆ ಅಂಧಂತಮಸ್ಸಿಗೆ ಪ್ರವೇಶವು ತಪ್ಪಿದ್ದಲ್ಲ.

ವಾಸುದೇವಸ್ಯ ಜೀವಸ್ಯ ಸಾಮ್ಯಮಿತ್ಯಕ್ಷರದ್ವಯಮ್ ।
ಮುಕ್ತೌ ಬ್ರುವನ್ ಸುಚಂಡಾಲೋ ಬ್ರಹ್ಮಹಾ ಸ ಭವೇದ್ಧ್ರುವಮ್ ೧೫

ಜೀವ ಮತ್ತು ವಾಸುದೇವರಿಗೆ ಮುಕ್ತಿಯಲ್ಲಿ 'ಸಾಮ್ಯ'ಎಂಬ ಎರಡಕ್ಷರವನ್ನು ನುಡಿಯುವವನು ಚಂಡಾಲನು, ಬ್ರಹ್ಮಹತ್ಯೆ ಮಾಡಿದವನು ; ಇದು ನಿಶ್ಚಯ.

ಮೋಹಾತ್ ಕಾಮಾದಶಾಸ್ತ್ರಾಚ್ಚ ಮುಕ್ತೌ ಸಾಮ್ಯಂ ಬ್ರುವನ್ ಜನಃ ।
ವಾಸುದೇವಸ್ಯ ರುದ್ರಸ್ಯ ಮೃತೋ ನಿರಯ(ನರಕ)ಮಾಪ್ನುಯಾತ್॥೧೬॥

ಮೋಹದಿಂದಾಗಲಿ, ಕಾಮದಿಂದಾಗಲಿ, ಶಾಸ್ತ್ರವಿರುದ್ಧವಾದ ಶಿವ ಮತ್ತು ವಿಷ್ಣುಗಳ ಸಾಮ್ಯವನ್ನು ನುಡಿಯುವವನು ಮರಣಾನಂತರ ನರಕಕ್ಕೆ ತೆರಳುವನು.

ಬ್ರಹ್ಮಕಾರ್ಯಂ ಜಗದಿದಂ ಬ್ರುವನ್ನಜ್ಞೋ ನ ಸಂಶಯಃ ।
ಮರಣಂ ಪ್ರಾಪ್ಯ ಮೂಢಾತ್ಮಾ ತಮೋ ನಿಶತಿ ಶಾಶ್ವತ(ಸ ಧ್ರುವ)ಂ॥೧೭॥

ಈ ಜಗತ್ತು ಬ್ರಹ್ಮನ ವಿಕಾರ ಎಂದು ನುಡಿಯುವವನು ತಿಳುವಳಿಕೆಯೇ ಇಲ್ಲದವನು ; ಸಂಶಯವಿಲ್ಲ; ಅಂತಹ ಮೂರ್ಖನು ಸತ್ತ ನಂತರ ನಿತ್ಯವಾದ ತಮಸ್ಸನ್ನೇ ಹೊಂದುವನು.

ಶೈವಾನ್ ರಾಮಾನುಜಾಂಶ್ಚೈವ ತಾರ್ಕಿಕಾನಂತ್ಯಜಾಂಸ್ತಥಾ ।
ಸ್ಮೃತ್ವಾ(ಸ್ಪೃಷ್ಟ್ವಾ)ಸ್ನಾನಂ ಪ್ರಕುರ್ವೀತ ಗಾಯತ್ರ್ಯಷ್ಟಶತಂ ಜಪೇತ್॥

ಶೈವರು, ರಾಮಾನುಜಮತದವರು, ತಾರ್ಕಿಕರು ಮೊದಲಾದವನ್ನು ನೆನೆಸಿದರೂ ಸಾಕು ; ಸ್ನಾನ ಮಾಡಬೇಕು ; ನೂರೆಂಟುಬಾರಿ ಗಾಯತ್ರಿಯನ್ನು ಜಪಿಸಬೇಕು.

ಸ [1]ಬ್ರಹ್ಮಹಾ ಸ ಗೋಘ್ನಶ್ಚ ಸ್ತೇಯೀ(ನಃ) ಸ ಗುರುತಲ್ಪಗಃ ।
ಮುಕ್ತೌ ಸಾಮ್ಯಂ ಬ್ರುವಾಣೋ ಹಿ ಜೀವಸರ್ವೇಶಯೋರಪಿ ॥ ೧೯ ॥

ಜೀವ ಮತ್ತು ಈಶರಿಗೆ ಮುಕ್ತಿಯಲ್ಲಿ ಸಾಮ್ಯ ಹೇಳುವವನು ಬ್ರಹ್ಮಹತ್ಯೆ ಮಾಡಿದವನು, ಗೋವನ್ನು ಕೊಂದವನು, ಚಿನ್ನ ಕದ್ದವನು, ಗುರುತಲ್ಪ ಗಮನ ಮಾಡಿದವನು ಆಗುವನು.

[2]ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಮ್ ।
ವರಂ ಹತ್ಯಾ ಸುರಾಪಾನಂ ಮುಕ್ತೌ ಸಾಮ್ಯಸ್ಯ ಚೋದನಾತ್ ॥ ೨೦ ॥

ಮುಕ್ತಿಯಲ್ಲಿ (ಜೀವೇಶರಿಗೆ) ಸಾಮ್ಯ ಹೇಳುವುದಕ್ಕಿಂತ ಮಾತೃಗಮನ, ಗೋಮಾಂಸಭಕ್ಷಣ ಮತ್ತು ಬ್ರಹ್ಮಹತ್ಯೆ ಮತ್ತು ಮದ್ಯಪಾನಗಳು ಉತ್ತಮ.

ಮುಕ್ತಾವಪಿ ಚ ಸಂಸಾರೇ ನ ಸಾಮ್ಯಂ ಬ್ರಹ್ಮಜೀವಯೋಃ ।
ಸಂಪೂರ್ಣಾನಂದವಾನ್ ವಿಷ್ಣುಃ ಸಂಪೂರ್ಣಾಜ್ಞಾನವಾನ್ ನರಃ ॥ ೨೧ ॥

ಮುಕ್ತಿಯಲ್ಲೇ ಆಗಲಿ, ಸಂಸಾರದಲ್ಲೇ ಆಗಲಿ, ಜೀವಬ್ರಹ್ಮರಿಗೆ ಸಾಮ್ಯವು ಸಾಧ್ಯವಿಲ್ಲ; ವಿಷ್ಣುವು ಆನಂದಪೂರ್ಣನು; ಜೀವನು ಎಂದೂ ಅವನನ್ನು ಸಂಪೂರ್ಣ ತಿಳಿಯದ ಅಜ್ಞಾನಿ ; ಅವರಲ್ಲಿ ಸಾಮ್ಯವಾಗಲೀ, ಐಕ್ಯವಾಗಲಿ ಎಂದೂ ಇರುವುದಿಲ್ಲ.

ಯದಾ ಸಂಜಾಯತೇ ಸಂಗೋ ಜಾಯಯಾ ಮಾಯಿನೋಽಸ್ಯ ಚ ।
ಮಾತೃಸಂಗಃ ಸ ವಿಜ್ಞೇಯೋ ಹ್ಯಭಿನ್ನತ್ವಂ ಯತಸ್ತಯೋಃ ॥ ೨೨ ॥

ಮಾಯಾವಾದಿಗಳು ಎಲ್ಲರಿಗೂ ಅಭೇದ ಹೇಳುವವರು : ಎಂದರೆ ಅವರು ಪತ್ನೀಸಂಗಮಾಡಿದಾಗ ಮಾತೃಸಂಗವನ್ನೇ ಮಾಡಿದಂತಾಗುವುದಿಲ್ಲವೇ ?

ಮಧ್ವಶಾಸ್ತ್ರಂ ದೂಷಯಿತ್ವಾ ಸಾಮ್ಯಶಾಸ್ತ್ರಂ ಭಜೇದ್ಯದಿ ।
ದುಃಖಾತ್ಮಕಂ ತಮಸ್ತಸ್ಯ ಭವತ್ಯೇವ ನ ಸಂಶಯಃ ॥ ೨೩ ॥

ಮಧ್ವಶಾಸ್ತ್ರವನ್ನು ತೊರೆದು ಸಾಮ್ಯಶಾಸ್ತ್ರವನ್ನು ಆಶ್ರಯಿಸಿದವನಿಗೆ ದುಃಖಾತ್ಮಕವಾದ ತಮಸ್ಸೇ ಆಗುವುದು ; ಸಂಶಯವಿಲ್ಲ.

---

1 ಸ ಬ್ರಹ್ಮಹಾ ಸ ಗೋಘ್ನಶ್ಚ ಸ್ತೇಯೀ ಸ ಗುರುತಲ್ಪಗಃ ।
ಏಕಾದಶ್ಯಾಂ ತು ಭುಂಜಾನಃ ಪಕ್ಷಯೋರುಭಯೋರಪಿ ॥ —(ಕೃ.ಮು.)

2 ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಂ ।
ವರಂ ಹತ್ಯಾ ಸುರಾಪಾನಮೇಕಾದಶ್ಯನ್ನಭಕ್ಷಣಾತ್ ॥ —(ಕೃ.ಮು.)

ಯನ್ಮಾಯೀ ಕ್ಷುನ್ನಿವೃತ್ತ್ಯರ್ಥಮನ್ನಂ ಭುಂಕ್ತೇ ಚ ಶ್ವಾನವತ್ ।
ವಿಷ್ಠಾಭುಕ್ತಿಶ್ಚ ತಜ್ಜ್ಞೇಯಂ ಹ್ಯಭಿನ್ನತ್ವಂ ಯತಸ್ತಯೋಃ ॥ ೨೪ ॥

ಮಾಯಾವಾದಿಯು ಹಸಿವಾದಾಗ ಅನ್ನ ತಿನ್ನುವುದು ನಾಯಿಯು ಮಲವನ್ನು ತಿಂದಂತೆಯೇ ಸರಿ ; ಏಕೆಂದರೆ ಅವರ ಪ್ರಕಾರ ಅವುಗಳಲ್ಲಿ ಭೇದವೇ ಇಲ್ಲವಲ್ಲ !

ಸ್ವಗ್ರಾಮಗಮನೇ ಮಾಯೀ ಹ್ಯಶ್ವಮಾರುಹ್ಯ ಗಚ್ಛತಿ ।
ಶ್ವಾನಾರೂಢಃ ಸ ವಿಜ್ಞೇಯೋ ಹ್ಯಭಿನ್ನತ್ವಂ ತಯೋರ್ಯತಃ ॥ ೨೫ ॥

ಮಾಯಿಯು ಕುದುರೆಯನ್ನೇರಿ ತನ್ನ ಗ್ರಾಮಕ್ಕೆ ತೆರಳುತ್ತಾನೆ ; ಆಗ ಅವನು 'ಶ್ವಾನಾರೂಢ'ವೆನ್ನಿಸುವವನು; ಏಕೆಂದರೆ ಅವರ ಪ್ರಕಾರ ಅವರೆರಡರಲ್ಲಿ ಭೇದವೆಲ್ಲಿದೆ !

ಯೇನ ಬ್ರಾಹ್ಮಣ್ಯಸಿದ್ಧ್ಯರ್ಥಮುಪವೀತಂ ತು(ಚ) ಧಾರ್ಯತೇ ।
ಚರ್ಮಧಾರೀ ಸ ವಿಜ್ಞೇಯೋ ಹ್ಯಭಿನ್ನತ್ವಂ ಯತಸ್ತಯೋಃ ॥ ೨೬ ॥

ಮಾಯಾವಾದಿಯಾದವನು ಬ್ರಾಹ್ಮಣ್ಯ ಸಿದ್ಧಿಗೆಂದು ಕೊರಳಲ್ಲಿ ಯಜ್ಞೋಪವೀತ ಧರಿಸಿದಾಗ ಅವನನ್ನು 'ಚರ್ಮಧಾರೀ' ಎನ್ನಬೇಕು ; ಅವೆರಡಕ್ಕೂ ಅವರ ಪ್ರಕಾರ ಅಭೇದವೇ ಇರುವುದಲ್ಲವೇ ?

ವಾಯುದೇವಂ[1] ಪರಿತ್ಯಜ್ಯ ಯೋಽನ್ಯಂ ಗುರುಮುಪಾಸತೇ ।
ತೃಷಿತೋ ಜಾಹ್ನವೀತೀರೇ ಕೂಪಂ ಖನತಿ ದುರ್ಮತಿಃ ॥ ೨೭ ॥

ಶ್ರೀಮಧ್ವಾಚಾರ್ಯರನ್ನು ಬಿಟ್ಟು ಮತ್ತೊಬ್ಬ ಗುರುವನ್ನು ಅರಸುವವನು ಬಾಯಾರಿದಾಗ ಗಂಗಾತೀರದಲ್ಲಿ ಬಾವಿ ತೋಡುವ ಮೂರ್ಖನೇ ಸರಿ.

[2]ಸ್ವಮಾತರಂ ಪರಿತ್ಯಜ್ಯ ಶ್ವಪಾಕೀಂ ವಂದತೇ ಯಥಾ ।
ತಥಾ ವಾಯುಂ ಪರಿತ್ಯಜ್ಯ ಯೋಽನ್ಯಂ ಗುರುಮುಪಾಸತೇ ॥ ೨೮ ॥

ವಾಯುದೇವರಾದ ಮಧ್ವಾಚಾರ್ಯರನ್ನು ತೊರೆದು ಮತ್ತೊಬ್ಬ ಗುರುವನ್ನು ಉಪಾಸಿಸುವವನು, ತನ್ನ ತಾಯಿಯನ್ನು ತೊರೆದು ಶ್ವಪಾಕಿಯನ್ನು ನಮಸ್ಕರಿಸುವವನಂತೆಯೇ ಸರಿ.

ಮಧ್ವಂ ಗುರುಂ ಪರಿತ್ಯಜ್ಯ ವಿಷ್ವಕ್ಸೇನಂ ಭಜೇದ್ಯದಿ ।
ಸ ಜೀವನ್ನೇವ ಚಂಡಾಲೋ ಮೃತೋಽಪಿ ತಮ ಆಪ್ನುಯಾತ್ ॥ ೨೯ ॥

ಗುರುಗಳಾದ ಶ್ರೀ ಮಧ್ವಾಚಾರ್ಯರನ್ನು ತೊರೆದು ವಿಷ್ವಕ್ಸೇನನನ್ನು ಆ ಸ್ಥಾನದಲ್ಲಿ ಭಜಿಸುವವನು ಬದುಕಿದಾಗ ಚಂಡಾಲನೆನ್ನಿಸುವವನು ; ಸತ್ತಮೇಲೆ ತಮಸ್ಸನ್ನೂ ಹೊಂದುವನು.

---

1 ವಾಯುದೇವಂ ಪರಿತ್ಯಜ್ಯ ಯೋಽನ್ಯಂ ದೈವಮುಪಾಸತೇ ।
ತೃಷಿತೋ ಜಾಹ್ನವೀತೀರೇ ಕೂಪಂ ಖನತಿ ದುರ್ಮತಿಃ ॥ —(ಕೃ.ಮ.)

2 ಸ್ವಮಾತರಂ ಪರಿತ್ಯಜ್ಯ ಶ್ವಪಾಕೀಂ ವಂದತೇ ಯಥಾ ।
ವಾಸುದೇವಂ ಪರಿತ್ಯಜ್ಯ ಯೋಽನ್ಯಂ ದೈವಮುಪಾಸತೇ ॥ —(ಕೃ.ಮ.)

ಪಕ್ಷಿಣೋ ನಿತ್ಯಮುಕ್ತತ್ವಂ ಕಲ್ಪಯಿತ್ವಾ ತು ದುರ್ಮನಾಃ ।
ತಂ ಗುರುಂ ಭಜತೇ ಯಸ್ತು ತಮೋ ವಿಶತಿ ಸ ಧ್ರುವಮ್ ॥ ೩೦ ॥

ಗರುಡನಿಗೆ ನಿತ್ಯಮುಕ್ತತ್ವವನ್ನು ಕಲ್ಪಿಸಿ ಅವರನ್ನೇ ಮುಖ್ಯ ಗುರುವು ಎಂದು ಭಜಿಸುವವನು ತಮಸ್ಸನ್ನು ಹೊಂದುವುದು ಖಚಿತ.

ಶ್ರೀಮಧ್ವಂ ಚ ಪರಿತ್ಯಜ್ಯ ಸರ್ಪರಾಜಂ ಭಜೇದ್ಯದಿ ।
ನರಕೇ ಪಚ್ಯತೇ ಘೋರೇ ಯುಗಾನಾಮೇಕಸಪ್ತತಿಃ ॥ ೩೧ ॥

ಶ್ರೀಮಧ್ವರನ್ನು ಬಿಟ್ಟು ಶೇಷನನ್ನು (ಗುರುವೆಂದು) ಭಜಿಸುವವನು 71 (ಮಹಾ)ಯುಗಗಳ ಕಾಲ (ಒಂದು ಮನ್ವಂತರಕಾಲ) ನರಕದಲ್ಲಿ ಬೇಯುವನು.

ಮಧ್ವಸ್ಯ ದ್ವೇಷಿಣಂ ದೃಷ್ಟ್ವಾ ಸ ಚೈಲಂ ಸ್ನಾನಮಾಚರೇತ್ ।
ಅನ್ಯಥಾ ತಮ ಆಪ್ನೋತಿ ಯಸ್ಮಾನ್ನೈವೋತ್ಥಿತಿಃ ಕ್ವಚಿತ್ ॥ ೩೨ ॥

ಶ್ರೀಮಧ್ವಾಚಾರ್ಯರ ದ್ವೇಷಿಗಳನ್ನು ಕಂಡೊಡನೆ ಸಚೈಲಸ್ನಾನಮಾಡಬೇಕು. ಇಲ್ಲವಾದಲ್ಲಿ ಮತ್ತೆ ಮೇಲೇಳುವ ಅವಕಾಶವೇ ಇಲ್ಲದ ತಮಸ್ಸಿಗೆ ಬೀಳಬೇಕಾಗುತ್ತದೆ.

ನಿತ್ಯಕರ್ಮರತೋ ನಿತ್ಯಂ ನಿತ್ಯಂ ವೈ ದೇವಪೂಜಕಃ ।
ಮಧ್ವಶಾಸ್ತ್ರಸ್ಯ ಸಂತ್ಯಾಗಾತ್ ಚಂಡಾಲತ್ವಮವಾಪ್ನುಯಾತ್ ॥ ೩೩ ॥

ನಿತ್ಯವೂ ಸಕಲ ನಿತ್ಯಕರ್ಮಗಳನ್ನು ತಪ್ಪದೆ ಮಾಡುತ್ತಿರಬಹುದು ; ನಿತ್ಯವೂ ದೇವಪೂಜೆ ಮಾಡುತ್ತಿರಬಹುದು ; ಆದರೆ ಮಧ್ವಶಾಸ್ತ್ರವನ್ನು ಕೈಬಿಟ್ಟಲ್ಲಿ ಮಾತ್ರ ಚಂಡಾಲತ್ವವನ್ನೇ ಹೊಂದುವನು.

ಮಧ್ವಶಾಸ್ತ್ರಂ ತು ಯೋ ವಿಪ್ರೋ ನ ಪಠೇನ್ನ ಸ್ಮರೇದ್ಯದಿ ।
ಕಂಠೇ ಬದ್ಧ್ವಾ ಶಿಲಾಂ ಗುರ್ವೀಂ ವಿಷ್ಟಾಕೂಪೇ ವಿನಿಕ್ಷಿಪೇತ್ ॥ ೩೪ ॥

ಮಧ್ವಶಾಸ್ತ್ರವನ್ನು ಓದದ ಮತ್ತು ಸ್ಮರಿಸದ ವಿಪ್ರನನ್ನು ಕೊರಳಿಗೆ ಬಂಡೆಯನ್ನು ಕಟ್ಟಿ ಮಲದ ಕೂಪದಲ್ಲಿ ಎಸೆದು ಬಿಡಬೇಕು.

ಚಂಡಾಲೋಽಪಿ ನ ಚಂಡಾಲೋ ಗುರುದ್ರೋಹೀ ನ ದೋಷಭಾಕ್ ।
ಮಧ್ವಶಾಸ್ತ್ರಸ್ಯ ಸಂತ್ಯಾಗಾತ್(ಗೀ) ಸ ತು ಚಂಡಾಲ ಇತಿ ಉಚ್ಯತೇ ॥೩೫॥

ಚಂಡಾಲನು ಚಂಡಾಲನಲ್ಲ ; ಗುರುದ್ರೋಹಿಯೂ ದೋಷಿಯಲ್ಲ ; ಮಧ್ವಶಾಸ್ತ್ರವನ್ನು ತೊರೆದವನು ಮಾತ್ರ ನಿಶ್ಚಿತವಾಗಿಯೂ ಚಂಡಾಲನೆನ್ನಿಸುವನು.

ಸಹಸ್ರಶಾಖಾಧ್ಯಾಯೀ ಚ ಸರ್ವಯಜ್ಞೇಷು ದೀಕ್ಷಿತಃ ।
ವಿಷ್ಣುಭಕ್ತೋಽಪಿ ಮೂಢಾತ್ಮಾ ನ ವಂದ್ಯೋ ಮಧ್ವದೂಷಕಃ ॥ ೩೬ ॥

ಮಧ್ವರನ್ನು ನಿಂದಿಸುವವನು ವೇದದ ಸಾವಿರ ಶಾಖೆಗಳನ್ನು ಓದಿದ್ದರೂ, ಸಕಲಯಜ್ಞಗಳಲ್ಲಿ ದೀಕ್ಷಿತನಾಗಿದ್ದರೂ, ವಂದ್ಯನೆನ್ನಿಸುವುದಿಲ್ಲ; ಅವನು ಮೂರ್ಖನೇ ಸರಿ.

ಧರ್ಮಶಾಸ್ತ್ರಸ್ಯ ವಕ್ತಾಽಪಿ ಸರ್ವಭೂತಹಿತೇ ರತಃ ।
ಸರ್ವಕಾಮವಿಹೀನೋಽಪಿ ನ ಪೂಜ್ಯೋ ಮಧ್ವದೂಷಕಃ ॥ ೩೭ ॥

ಧರ್ಮಶಾಸ್ತ್ರ ಪ್ರವಚನ ಮಾಡುತ್ತಿರಬಹುದು ; ಸಕಲ ಪ್ರಾಣಿಗಳ ಹಿತೈಷಿಯೂ ಆಗಿರಬಹುದು ; ಸಕಲಕಾಮನೆಗಳನ್ನು ತೊರೆದಿರಲೂಬಹುದು ; ಆದರೆ ಮಧ್ವರನ್ನು ದೂಷಿಸುವವನಾಗಿದ್ದಲ್ಲಿ ಆವನು ಪೂಜ್ಯನೆನ್ನಿಸುವುದೇ ಇಲ್ಲ.

ಮಧ್ವಶಾಸ್ತ್ರಮುಪೇಕ್ಷ್ಯಾಥ ವೇದಮೇವ ಪಠೇದ್ಧಿ ಯಃ ।
ಸ ಜೀವನ್ನೇವ ಚಂಡಾಲೋ ಮೃತೋ ನಿರಯಮಾಪ್ನುಯಾತ್ ॥ ೩೮ ॥

ವೇದವನ್ನೆಲ್ಲ ಪಠಿಸಿದ್ದರೂ ಮಧ್ವಶಾಸ್ತ್ರವನ್ನು ಕಡೆಗಣಿಸುವವನು ಬದುಕಿದ್ದಾಗ ಚಂಡಾಲನೆನ್ನಿಸುವನು ; ಸತ್ತಮೇಲೆ ನರಕವನ್ನು ಹೊಂದುವನು.

ಶಾಂತೋ ದಾಂತೋ ನಿಃಸ್ಪೃಹಶ್ಚ ದೃಢಭಕ್ತಿರ್ದೃಢವ್ರತಃ ।
ವಿಷ್ಣುಭಕ್ತೋಽಪಿ ಮೂಢಾತ್ಮಾ ನ ವಂದ್ಯೋ ಮಧ್ವದೂಷಕಃ ॥ ೩೯ ॥

ಶಾಂತನಿರಬಹುದು, ಜಿತೇಂದ್ರಿಯನಿರಬಹುದು, ನಿಃಸ್ಪೃಹನಾಗಿರಬಹುದು, ದೃಢಭಕ್ತಿಯನ್ನು ಹೊಂದಿರಬಹುದು, ವಿಷ್ಣುಭಕ್ತನೂ ಆಗಿರಬಹುದು ; ಆದರೆ ಅವನು ಮಧ್ವದೂಷಕನಾಗಿದ್ದಲ್ಲಿ ಮೂಢಾತ್ಮನೇ ಸರಿ ; ಅವನು ವಂದ್ಯನೆನ್ನಿಸಲಾರನು.

ಶ್ರೀಮಧ್ವಶಾಸ್ತ್ರಚಕ್ರಾದಿರಹಿತೋ ಬ್ರಾಹ್ಮಣಾಧಮಃ ।
ಪ್ರಚ್ಯುತಃ ಸರ್ವಪುಣ್ಯೆ(ಧರ್ಮೆ)ಭ್ಯೋ ನಿರಯಂ ಗಚ್ಛತಿ ಧ್ರುವಮ್ ೪೦

ಶ್ರೀಮಧ್ವಶಾಸ್ತ್ರ ತಪ್ತಚಕ್ರಧಾರಣೆ ಮೊದಲಾದವುಗಳನ್ನು ಹೊಂದದ ಬ್ರಾಹ್ಮಣಾಧಮನು ಸಕಲ ಪುಣ್ಯ(ಧರ್ಮ)ಗಳಿಂದ ಬಾಹಿರನಾಗಿ ಖಚಿತವಾಗಿ ನರಕ ಸೇರುವನು.

ಮಧ್ವಶಾಸ್ತ್ರೋರ್ಧ್ವಪುಂಡ್ರಾದಿಚಿಹ್ನೈಃ ಪ್ರಿಯತಮೈರ್ಹರೇಃ ।
ಪ್ರಚ್ಯುತಃ ಸರ್ವಧರ್ಮೇಭ್ಯೋ ರಿಕ್ತೋ ನರಕಮಾಪ್ನುಯಾತ್ ॥ ೪೧ ॥

ಮಧ್ವಶಾಸ್ತ್ರ ಮತ್ತು ಊರ್ಧ್ವಪುಂಡ್ರಾದಿಲಾಂಛನ ಇವೆಲ್ಲ ಶ್ರೀಹರಿಗೆ ಪರಮ ಪ್ರಿಯವಾದವು. ಇವುಗಳನ್ನು ತೊರೆದವನು ಸಕಲ ಧರ್ಮಗಳಿಂದ ದೂರಾಗಿ ದರಿದ್ರನೂ ಆಗಿ ನರಕವನ್ನು ಹೊಂದುವನು.

ಅಶ್ರು(ಧೃ)ತ್ವಾ ಮಧ್ವಶಾಸ್ತ್ರಂ ತು ಯದಿ ಕರ್ಮ ಸಮಾಚರೇತ್ ।
ನಿಷ್ಫಲಂ ತು ಭವೇತ್ ಸರ್ವಮಿಷ್ಟಾಪೂರ್ತಂ ದ್ವಿಜೋತ್ತಮಾಃ ॥ ೪೨ ॥

ಮಧ್ವಶಾಸ್ತ್ರವನ್ನು ಓದದೆ ಯಾವ ಕರ್ಮವನ್ನು ಆಚರಿಸಿದರೂ ಅದು ನಿಷ್ಫಲವೆನ್ನಿಸುವುದು ; ಅಂತಹವನು ಮಾಡಿದ ಕೆರೆಬಾವಿಗಳ ನಿರ್ಮಾಣ, ಯಜ್ಞ ಮೊದಲಾದ ಸಕಲವೂ ವ್ಯರ್ಥವಾಗುವುವು.

ಉಪವೀತಂ ಶಿಖಾಬಂಧನಮೂರ್ಧ್ವಪುಂಡ್ರಂ ಸುಶೋಭನಮ್ ।
ಮಧ್ವನಾಮವಿಹೀನಸ್ಯ ವಿಪ್ರಸ್ಯ ವಿಫಲಂ ಭವೇತ್ ॥ ೪೩ ॥

ಯಜ್ಞೋಪವೀತ, ಶಿಖಾಬಂಧನ, ಸೊಗಸಾದ ಊರ್ಧ್ವಪುಂಡ್ರಧಾರಣೆ ಮೊದಲಾದ ಸಕಲವೂ ಮಧ್ವರ ಹೆಸರನ್ನು ಉಚ್ಚರಿಸದವನ ಪಾಲಿಗೆ ವ್ಯರ್ಥವೇ ಸರಿ

ಮಧ್ವನಾಮೋರ್ಧ್ವಪುಂಡ್ರಾದಿರಹಿತೋ ಬ್ರಾಹ್ಮಣಾಧಮಃ ।
ಸ ಜೀವನ್ನೇವ ಚಂಡಾಲಃ ಸರ್ವಕರ್ಮಬಹಿಷ್ಕೃತಃ ॥ ೪೪ ॥

ಮಧ್ವನಾಮ. ಊರ್ಧ್ವಪುಂಡ್ರಾದಿಗಳನ್ನು ತೊರೆಯುವ ಬ್ರಾಹ್ಮಣಾಧಮನು ಬದುಕಿದ್ದಾಗ ಚಂಡಾಲನೆನ್ನಿಸಿ ಸಕಲಕರ್ಮಗಳಿಗೂ ಬಾಹಿರನಾಗುವನು.

ವಿನಾ ಯಜ್ಞೋಪವೀತೇನ ವಿನಾ ಮಧ್ವಸ್ಯ ಕೀರ್ತನಾತ್ ।
ವಿನಾ ದ್ವೈತೇ(ದ್ವಯೇ)ನ ಯೋ(ವೈ)ವಿಪ್ರಶ್ಚಂಡಾಲತ್ವಮವಾಪ್ನುಯಾತ್ ॥

ಯಜ್ಞೋಪವೀತವನ್ನು ಧರಿಸದಿರುವುದು, ಮಧ್ವರ ಹೆಸರನ್ನು ಉಚ್ಚರಿಸದಿರುವುದು, ದ್ವೈತ ಮತವನ್ನು ತೊರೆಯುವುದು ಬ್ರಾಹ್ಮಣನ ಚಂಡಾಲತ್ವಕ್ಕೆ ಕಾರಣವಾಗುವವು.

*ಪ್ರಾಪ್ತೇ ಕಲಿಯುಗೇ ಘೋರೇ ಧರ್ಮಜ್ಞಾನವಿವರ್ಜಿತೇ ।
ನ ಕಶ್ಚಿತ್ ಸ್ಮರತೇ ಮಧ್ವಂ ಪ್ರಾಜ್ಞಂ ಶ್ರೀವ್ಯಾಸಸತ್ಪ್ರಿಯಮ್ ॥ ೪೬ ॥

ಧರ್ಮಜ್ಞಾನಗಳಿಗೆ ಎರವಾದ ಘೋರವಾದ ಕಲಿಯುಗದಲ್ಲಿ ಶ್ರೀವ್ಯಾಸರಿಗೆ ಪರಮಪ್ರಿಯರಾದ ಶ್ರೀ ಮಧ್ವರನ್ನು ಸ್ಮರಿಸದವರೇ ಬಹಳ.

ಮಧ್ವಭ(ಸ)ಕ್ತಸ್ಯ ನ ಪ್ರಾಯೋ ಹ್ಯಶುಭಂ ವಿದ್ಯತೇ ಕ್ವಚಿತ್ ।
ಮಧ್ವಭಕ್ತಂ ತು ಸಂದೃಷ್ಟ್ವಾ ಅಭಕ್ತಾ ದುಃಖಮಾಪ್ನುಯುಃ ॥ ೪೭ ॥

ಮಧ್ವಭಕ್ತರಿಗೆ ಅಶುಭವು ಎಂದೂ ಒದಗುವುದೇ ಇಲ್ಲ ; ಮಧ್ವಭಕ್ತರನ್ನು ಕಂಡೊಡನೆ ಮಧ್ವದ್ವೇಷಿಗಳು ದುಃಖಿಸತೊಡಗುವರು.

ಉಪಾಸ್ಯ ಪ್ರಥಮಂ ಮಧ್ವಂ ಪಶ್ಚಾನ್ನರಹರಿಂ ಭಜೇತ್ ।
ನಾನ್ಯಥಾ ಮೋಕ್ಷಮಾಪ್ನೋತಿ ಪ್ರತ್ಯುತ(ತಾ)ನರಕಂ ಭವೇತ್(ಧ್ರುವಂ) ॥

ಮೊದಲಿಗೆ ಮಧ್ವರನ್ನು ಆರಾಧಿಸಿ ಅನಂತರ ನರಹರಿಯನ್ನು ಭಜಿಸಬೇಕು. ಇಲ್ಲವಾದಲ್ಲಿ ಮೋಕ್ಷವು ಲಭಿಸದೆ ನರಕವೇ ಒದಗೀತು.

---

* ಪ್ರಾಪ್ತೇ ಕಲಿಯುಗೇ ಘೋರೇ ಧರ್ಮಜ್ಞಾನವಿವರ್ಜಿತೇ ।
ನ ಕಶ್ಚಿತ್ ಸ್ಮರತೇ ವಿಷ್ಣುಂ ದೇವದೇವಂ ಜನಾರ್ದನಂ ॥ —(ಕೃ.ಮ.)

ಇಹ ಜನ್ಮಾಂತರೇ ವಾಽಪಿ ಪ್ರಾಜ್ಞಶ್ಚೇನ್ಮಧ್ವನಾಮಕಮ್ ।
ಜ್ಞಾತ್ವೈವ ಮೋಕ್ಷಮಾಪ್ನೋತಿ ಹ್ಯನ್ಯಥಾ ತಮ ಏವ ಚ ॥ ೨೯ ॥

ಇಲ್ಲಾಗಲಿ, ಜನ್ಮಾಂತರದಲ್ಲೇ ಆಗಲಿ, ವಿವೇಕಿಯಾದವನು ಮಧ್ವರನ್ನು ತಿಳಿದೇ ಮೋಕ್ಷ ಹೊಂದಲು ಸಾಧ್ಯ : ಇಲ್ಲವಾದಲ್ಲಿ ತಮಸ್ಸೇ ಗತಿ.

ಕಿಂ[1] ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ।
ಯೋ ನಿತ್ಯಂ (ನ ಚ) ಧ್ಯಾಯತೇ ಮಧ್ವಂ ಪ್ರಾಜ್ಞಂ ಗುರುಮನನ್ಯಧೀಃ ॥

ಪ್ರಾಜ್ಞರೂ, ಗುರುಗಳೂ ಆದ ಮಧ್ವರನ್ನು ಏಕಾಗ್ರತೆಯಿಂದ ನಿತ್ಯ ಧ್ಯಾನಿಸಿ (ಸ)ದವನಿಗೆ ದಾನವೇಕೆ ? ತೀರ್ಥವೇಕೆ ? ತಪಸ್ಸೇಕೆ ? ಯಜ್ಞವೇಕೆ ?

[2]ಕುರುಕ್ಷೇತ್ರೇಣ ಕಿಂ ತಸ್ಯ ಪಿನಾಕಿನ್ಯಾ ಚ ತಸ್ಯ ಕಿಮ್ ।
ಜಿಹ್ವಾಗ್ರೇ ವರ್ತತೇ ಯಸ್ಯ ಮಧ್ವ ಇತ್ಯಕ್ಷರದ್ವಯಮ್ ॥ ೩೦ ॥

'ಮಧ್ವ' ಎಂಬ ಎರಡಕ್ಷರ ನಾಲಿಗೆ ಮೇಲಿರುವವನಿಗೆ, ಕುರುಕ್ಷೇತ್ರದಿಂದೇನು ಪಿನಾಕಿನಿಯಿಂದೇನು ?

[3]ಜೀವಿತಂ ಮಧ್ವಭಕ್ತಸ್ಯ ವರಂ ಪಂಚದಿನಾನ್ಯಪಿ ।
ನ ತು ಕಲ್ಪಸಹಸ್ರೈಸ್ತು ಭಕ್ತಿಹೀನಸ್ಯ ಮಾರುತೌ ॥ ೩೨ ॥

ಮಧ್ವರಲ್ಲಿ ಭಕ್ತಿಯಿಲ್ಲದೆ ಸಾವಿರ ಕಲ್ಪ ಬದುಕುವುದಕ್ಕಿಂತ, ಮಧ್ವಭಕ್ತನಾಗಿ ಐದು ದಿನ ಬದುಕುವುದು ಮೇಲು.

[4]ಕಿಂ ತೇನ ಜಾತಮಾತ್ರೇಣ ಭೂಭಾರೇಣಾನ್ನಶತ್ರುಣಾ ।
ಯೋ ನ ಚ ಧ್ಯಾಯತೇ ನಿತ್ಯ ಮಧ್ವಂ ಪ್ರಾಜ್ಞಮನನ್ಯಧೀಃ ॥ ೩೩ ॥

ನಿತ್ಯದಲ್ಲೂ ಮಧ್ವರನ್ನು ಅನನ್ಯಮನಸ್ಕನಾಗಿ ಭಕ್ತಿಯಿಂದ ಧ್ಯಾನಿಸದವನ ಬದುಕು ಎಂದರೆ ಭೂಮಿಗೆ ಭಾರ ; ಅನ್ನಕ್ಕೆ ಮೂಲ.

ಸರಸ್ವತ್ಯಾದಿಜೀವೇಭ್ಯೋಽಪ್ಯುತ್ತಮತ್ವಂ ಸುಭಕ್ತತಾಮ್ ।
ಜೀವಾನಾಂ ತದಧೀನತ್ವಂ ಯೋಗ್ಯಸದ್ಗುಣಪೂರ್ಣತಾಮ್ ॥ ೩೪ ॥

---

1 ಕಿಂ ತಸ್ಯ ದಾನೈಃ ಕಿಂ ತೀರ್ಥೈಃ ಕಿಂ ತಪೋಭಿಃ ಕಿಮಧ್ವರೈಃ ।
ಯೋ ನಿತ್ಯಂ ಧ್ಯಾಯತೇ ದೇವಂ ನಾರಾಯಣಮನನ್ಯಧೀಃ । —(ಕೃ.ಮ)

2 ಕುರುಕ್ಷೇತ್ರೇಣ ಕಿಂ ತಸ್ಯ ಕಿಂ ಕಾಶ್ಯಾ ಪುಷ್ಕರೇಣ ಚ ।
ಜಿಹ್ವಾಗ್ರೇ ವರ್ತತೇ ಯಸ್ಯ ಹರಿರಿತ್ಯಕ್ಷರದ್ವಯಮ್ ॥ —(ಕೃ.ಮ.)

3 ಜೀವಿತಂ ವಿಷ್ಣುಭಕ್ತಸ್ಯ ವರಂ ಪಂಚದಿನಾನ್ಯಪಿ ।
ನ ತು ಕಲ್ಪಸಹಸ್ರೈಸ್ತು ಭಕ್ತಿಹೀನಸ್ಯ ಕೇಶವೇ ॥ —(ಕೃ. ಮ.)

4 ಕಿಂ ತೇನ ಜಾತಮಾತ್ರೇಣ ಭೂಭಾರೇಣಾನ್ನಶತ್ರುಣಾ ।
ಯೋ ಜಾತೋ ನಾರ್ಚಯೇದ್ವಿಷ್ಣುಂ ನ ಸ್ಮರೇನ್ನಾಪಿ ಕೀರ್ತಯೇತ್ ॥—(ಕೃ.ಮ)

ನಿರ್ದೋಷತ್ವಂ ಚ ವಿಜ್ಞಾಯ ಮಧ್ವಸ್ಯ ಸಕಲಾಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ ಸರ್ವೋಪಾಯೋತ್ತಮೋತ್ತಮಃ ॥ ೫೫ ॥

"ಸರಸ್ವತಿ ಮೊದಲಾದ ಜೀವರಿಗಿಂತಲೂ ಉತ್ತಮರು, ಉತ್ತಮಭಗವದ್ಭಕ್ತರು ಇತರ ಜೀವರೆಲ್ಲ ಇವರಿಗೆ ಅಧೀನರು, ಇವರು ಯೋಗ್ಯವಾದ ಜ್ಞಾನಭಕ್ತ್ಯಾದಿ ಗುಣಗಳಿಂದ ಪೂರ್ಣರು, ದೋಷರಹಿತರು." ಎಂಬುದಾಗಿ ಶ್ರೀ ಮಧ್ವರ ಬಗ್ಗೆ ತಿಳಿದು ಅವರಲ್ಲಿ ತೋರುವ ಇತರರಲ್ಲಿಗಿಂತ ಹೆಚ್ಚಿನ ಆದರವೇ 'ಭಕ್ತಿ'ಎನ್ನಿಸುವುದು; ಇದು ಮೋಕ್ಷ ಪ್ರಾಪ್ತಿಗೆ ಸರ್ವಶ್ರೇಷ್ಠ ಉಪಾಯವಾಗದೆ.

ಅನರ್ಪಯಿತ್ವಾ ಮಧ್ವೇಶೇ ಯೋ ಭುಂಕ್ತೇ ಮಾನವಾಧಮಃ ।
ಶ್ವಾನವಿಷ್ಠಾಸಮಂ ಚಾನ್ನಂ ನೀರಂ ಚ ಸುರಯಾ ಸಮಮ್ ॥ ೫೬ ॥

ಮಧ್ವಪತಿಗೆ ಸಮರ್ಪಿಸದ ಮಾನವಾಧಮನು ತಿನ್ನುವ ಅನ್ನವು ನಾಯಿಯ ಮಲಕ್ಕೆ ಸಮಾನ ; ಕುಡಿಯುವ ನೀರು ಮದ್ಯಕ್ಕೆ ಸಮಾನ.

ಕವಲೇಕವಲೇಯಸ್ತುಮಧ್ವಶಾಸ್ತ್ರವಿಚಾರಣ(ಶ್ರೀಮಧ್ವಸ್ಯಾನುಕೀರ್ತನ)ಂ
ಜೀವನ್ಮುಕ್ತೋಽನ್ಯಥಾ ಕುರ್ವನ್ ಕೇವಲೋದರಪೂರಣಮ್ ॥ ೫೭ ॥

ತುತ್ತು ತುತ್ತಿಗೂ ಮಧ್ವಶಾಸ್ತ್ರವನ್ನು ವಿಚಾರ ಮಾಡುತ್ತ ಭೋಜನ ಮಾಡುವವನು ಜೀವನ್ಮುಕ್ತನೇ ಸರಿ ; ಇತರರು ಬರೀ ಹೊಟ್ಟೆ ಹೊರೆಯುಲೆಂದು ಬದುಕುವವರು ಮಾತ್ರ.

ಅಪೀತ್ವಾ ಮಧ್ವತೀರ್ಥಂ ತು ಯೋ ಭುಂಕ್ತೇ ಮನುಜಾಧಮಃ ।
ಶ್ವಾನವಿಷ್ಠಾಸಮಂ ಚಾನ್ನಂ ನರಕಂ ಚಾಧಿಗಚ್ಛತಿ ॥ ೫೮ ॥

ಮಧ್ವತೀರ್ಥವನ್ನು ಕುಡಿಯದೆ ತಿನ್ನುವ ಅನ್ನವು ನಾಯಿಯ ಮಲಕ್ಕೆ ಸಮಾನ ; ಹಾಗೆ ಮಾಡುವವನು ಮುಂದೆ ನರಕವನ್ನೂ ಹೋದುವನು.

ಮಧ್ವಭಕ್ತಂ ತು ಸದ್ವಿಪ್ರಂ ಕ್ರೂರಾ ಯಮಭಟಾ ಅಪಿ ।
ಸ್ವಪ್ನೇಽಪಿ ನೈವ ಪಶ್ಯಂತಿ ಸ ಮುಕ್ತಃ ಸರ್ವತೋ ಭಯಾತ್ ॥ ೫೯ ।

ಮಧ್ವಭಕ್ತನಾದ ವಿಪ್ರನನ್ನು ಕ್ರೂರರಾದ ಯಮಭಟರು ಸ್ವಪ್ನದಲ್ಲೂ ಕಾಣಲಾರರು ; ಮಧ್ವಭಕ್ತನು ಸಕಲ ಭಯಗಳಿಂದಲೂ ಮುಕ್ತನೇ ಸರಿ.

ತಿಸ್ರಃ ಕೋಟ್ಯೋಽರ್ಧಕೋಟ್ಯಸ್ತು ತೀರ್ಥಾನಿ ಭುವನತ್ರಯೇ ।
ಮಧ್ವಭಕ್ತಸ್ಯ ವಿಪ್ರಸ್ಯ ಪಾದೇ ತಿಷ್ಠಂತ್ಯಸಂಶಯಃ ॥ ೬೦ ॥

ಭುವನದಲ್ಲಿನ ಮೂರೂವರೆ ಕೋಟಿ ಪುಣ್ಯ ತೀರ್ಥಗಳೆಲ್ಲ ಮಧ್ವಭಕ್ತನಾದ ವಿಪ್ರನ ಪಾದದಲ್ಲಿ ನೆಲೆಸಿರುವವು ; ಸಂಶಯವಿಲ್ಲ.

ಯೇ ಕೇಚಿದ್ಯತ್ರ ಪುರುಷಾ ಮಧ್ವಲಾಂಛನ(ಶಾಸ್ತ್ರೇಣ)ಲಾಂಛಿತಾಃ ।
ತೇಷಾಂ ದರ್ಶನಮಾತ್ರೇಣ ಮಹಾಪಾತಕನಾಶನಮ್ ॥ ೬೧ ॥

ಮಧ್ವರು ಹೇಳಿದ ಚಿಹ್ನೆಗಳನ್ನು ಧರಿಸಿದ ಜನರ ದರ್ಶನ ಮಾತ್ರದಿಂದಲೇ ಮಹಾ ಪಾತಕಗಳೂ ಪರಿಹಾರವಾಗುವುವು.

ಚತುರ್ವೇದೀ ತು ಯೋ ವಿಪ್ರೋ ಮಧ್ವಂ ವಿಪ್ರಂ ನ ವಿಂದತಿ ।
ವೇದಭಾರಸಮಾಕ್ರಾಂತಃ ಸ ವೈ ಬ್ರಾಹ್ಮಣಗಾರ್ದಭಃ ॥ ೬೨ ॥

ನಾಲ್ಕು ವೇದಗಳನ್ನು ಓದಿದ್ದರೂ, ಮಧ್ವರನ್ನು ಮಾತ್ರ ತಿಳಿಯದವನು, ವೇದಗಳ ಭಾರವನ್ನು ಹೊತ್ತ ಬ್ರಾಹ್ಮಣಗಾರ್ದಭನೇ ಸರಿ.

ಮಧ್ವಭಕ್ತಸ್ಯ ವಿಪ್ರಸ್ಯ ಪಾದಪ್ರಕ್ಷಾಲನೋದಕಮ್ ।
ಪುನಾತಿ ಸಕಲಂ ಲೋಕಂ ಯಥಾ ತ್ರಿಪಥಗಾಮಿನೀ ॥ ೬೩ ॥

ಮಧ್ವಭಕ್ತನಾದ ವಿಪ್ರನ ಪಾದೋದಕವು ಗಂಗೆಯಂತೆ ಸಕಲ ಲೋಕವನ್ನು ಪಾವನಗೊಳಿಸುವುದು.

ರಾಕ್ಷಸಾಶ್ಚ ಪಿಶಾಚಾಶ್ಚ ಗಂಧರ್ವಾ ದೈತ್ಯದಾನವಾಃ ।
ಮಧ್ವಭಕ್ತಸ್ಯ ದೇಹಂ ತು ದೃಷ್ಟ್ವಾ ನಶ್ಯಂತಿ ದೂರತಃ ॥ ೬೪ ॥

ರಾಕ್ಷಸರು, ಪಿಶಾಚಿಗಳು, ಗಂಧರ್ವರು, ದೈತ್ಯರು ದಾನವರು ಮೊದಲಾಗಿ ಎಲ್ಲ ದುಷ್ಟರೂ ಮಧ್ವಭಕ್ತನ ದೇಹವನ್ನು ಕಾಣುತ್ತಲೇ ದೂರಕ್ಕೆ ಪಲಾಯನ ಮಾಡುವರು.

***ಮ್ಲೇಚ್ಛದೇಶೇಽಶುಚೌ ವಾಽಪಿ ಮಧ್ವಶಾಸ್ತ್ರಂ ತು ಯತ್ರ ವೈ ।**
ಯೋಜನಾನಿ ತಥಾ ತ್ರೀಣಿ ಮಧ್ವಕ್ಷೇತ್ರಂ ವಸುಂಧರೇ ॥ ೬೫ ॥

ಮಧ್ವಶಾಸ್ತ್ರವಿರುವ ಸ್ಥಳವು ಮ್ಲೇಚ್ಛದೇಶವಾಗಿರಲಿ, ಅಶುಚಿಯಾಗಿರಲಿ ; ಅದು ಮಾತ್ರವಲ್ಲದೆ ಅದರ ಸುತ್ತಲಿನ ಮೂರುಯೋಜನಗಳೂ ಪಾವನವಾದ ಮಧ್ವ ಕ್ಷೇತ್ರವೆನ್ನಿಸುವುದು. (ಮನೆಯಲ್ಲಿ ಸರ್ವಮೂಲ ಗ್ರಂಥಗಳನ್ನು ಹೊಂದಿದ್ದರೆ, ಅದು ಮಧ್ವಕ್ಷೇತ್ರವೇ ಸರಿ ಎಂಬ ಭಾವವೂ ಇಲ್ಲಿದೆ).

ಮಧ್ವಶಾಸ್ತ್ರಂ ಪರಿತ್ಯಜ್ಯ ದುಷ್ಟಶಾಸ್ತ್ರಂ ಭಜೇದ್ಯದಿ ।
ಕಂಠೇ ತಸ್ಯ ಶಿಲಾಂ ಬದ್ಧ್ವಾ ಕೂಪಯಾಕೂಪೇ ವಿನಿಕ್ಷಿಪೇತ್ ॥ ೬೬ ॥

ಮಧ್ವಶಾಸ್ತ್ರವನ್ನು ತೊರೆದು, ದುಷ್ಟಶಾಸ್ತ್ರಗಳನ್ನು ಓದುವವನ ಕೊರಳಿಗೆ ಬಂಡೆಯನ್ನು ಕಟ್ಟಿ ಕೀವಿನ ಬಾವಿಯಲ್ಲಿ ಎಸೆದು ಬಿಡಬೇಕು.

---

* ಮ್ಲೇಚ್ಛದೇಶೇಽಶುಚೌ ವಾಽಪಿ ಚಕ್ರಾಂಕೋ ಯತ್ರ ತಿಷ್ಠತಿ ।
ಯೋಜನಾನಿ ತಥಾ ತ್ರೀಣಿ ಮಮ ಕ್ಷೇತ್ರಂ ವಸುಂಧರೇ ॥ (ಕೃ ಮ.)

ವ್ಯಾಸಶಾಸ್ತ್ರಂ ತು ಸಚ್ಛಾಸ್ತ್ರಂ ಮಧ್ವಶಾಸ್ತ್ರಂ ತಥೈವ ಚ ।
ಏತದನ್ಯತ್ತು ಯಚ್ಛಾಸ್ತ್ರಮಸಚ್ಛೇತಿ ವಿದುರ್ಬುಧಾಃ ॥ ೬೭ ॥

ವ್ಯಾಸಶಾಸ್ತ್ರವು ಸಚ್ಛಾಸ್ತ್ರ; ಅದರಂತೆ ಮಧ್ವಶಾಸ್ತ್ರವೂ ಸಚ್ಛಾಸ್ತ್ರವೇ; ಉಳಿದೆಲ್ಲ ಶಾಸ್ತ್ರಗಳು ಅಸಚ್ಛಾಸ್ತ್ರಗಳು ಎಂದೇ ಬಲ್ಲವರ ಮತ (ನ ತ ದ್ವಾಜ್ಯಸಮಂ ಶಾಸ್ತ್ರಂ).

ಮಧ್ವಶಾಸ್ತ್ರಂ ಪರಿತ್ಯಜ್ಯ ದುಷ್ಟಶಾಸ್ತ್ರಂ ಭಜೇದ್ಯದಿ ।
ಕಲ್ಪವೃಕ್ಷಂ ಪರಿತ್ಯಜ್ಯ ಪಿಚುಮಂದಂ ಭಜೇತ್ ಸ ವೈ(ಯಥಾ) ॥ ೬೮ ॥

ಮಧ್ವಶಾಸ್ತ್ರವನ್ನು ತೊರೆದು ದುಷ್ಟಶಾಸ್ತ್ರವನ್ನು ಓದುವವನು, ಕಲ್ಪವೃಕ್ಷವನ್ನು ತೊರೆದು ಬೇವಿನಮರವನ್ನು ಸೇವಿಸುವವನೇ ಸರಿ.

ಮಧ್ವಶಾಸ್ತ್ರಪ್ರವಕ್ತಾ ಹಿ ಯತ್ಕೃತಂ ತತ್ಕೃತಂ ಭವೇತ್ ।
ಸಾಧಿತೋ ತೇನ ಮೋಕ್ಷೋ ವೈ ಯೋಗಿನಾಮಪಿ ದುರ್ಲಭಃ ॥ ೬೯ ॥

ಮಧ್ವಶಾಸ್ತ್ರವನ್ನು ಪಾಠ ಹೇಳುವವನು ಮಾಡಿದ್ದೆಲ್ಲ ಸಾರ್ಥಕ; ಯೋಗಿಗಳಿಗೂ ದೊರೆಯದ ಮೋಕ್ಷವು ಅವನಿಗೆ ದೊರೆಯುವುದು. (ಯೋಗಾಭ್ಯಾಸಕ್ಕಿಂತ ಮಧ್ವಶಾಸ್ತ್ರದ ಪಾಠಪ್ರವಚನಗಳು ಮಿಗಿಲು ಎಂದು ಭಾವ).

ಮಧ್ವಶಾಸ್ತ್ರಂ ವಿನಾ ಮುಕ್ತಿಸ್ತೈಲಾಭಾವೇ ಚ ದೀಪವತ್ ।
ಅನ್ಯಶಾಸ್ತ್ರೇಣ ಯಾ ಮುಕ್ತಿರ್ವಿಷಸಂಪೃಕ್ತಖಾದ್ಯವತ್ ॥ ೭೦ ॥

ಮಧ್ವಶಾಸ್ತ್ರವನ್ನು ತೊರೆದು ಮೋಕ್ಷ ಪಡೆಯುವ ಯತ್ನವು ಎಣ್ಣೆಯಿಲ್ಲದೆ ದೀಪ ಉರಿಸುವ ವ್ಯರ್ಥ ಪ್ರಯತ್ನವೇ ಸರಿ; ಇತರಶಾಸ್ತ್ರಗಳಿಂದ ಮುಕ್ತಿ ಬಯಸುವುದು ವಿಷ ಮೆತ್ತಿದ ಖಾದ್ಯವನ್ನು ತಿನ್ನುವಂತೆಯೇ ಸರಿ.

ಮಧ್ವಶಾಸ್ತ್ರೇಣ ಯಾ ಮುಕ್ತಿಃ ಕ್ಷೀರಸಂಪೃಕ್ತಸರ್ಪಿ(ಖಾದ್ಯ)ವತ್ ।
ತಸ್ಮಾತ್ ಸರ್ವಪ್ರಯತ್ನೇನ ಮಧ್ವಶಾಸ್ತ್ರಂ ಭಜೇತ್ ಸುಧೀಃ ॥ ೭೧ ॥

ಮಧ್ವಶಾಸ್ತ್ರದಿಂದ ಮುಕ್ತಿ ಎಂಬುದು ಹಾಲಿನೊಂದಿಗೆ ಬೆರೆತ ಘೃತವಿದ್ದಂತೆ; ಆದ್ದರಿಂದ ವಿವೇಕಿಯಾದವನು ಸರ್ವಪ್ರಯತ್ನದಿಂದಲೂ ಮಧ್ವಶಾಸ್ತ್ರವನ್ನೇ ಭಜಿಸಬೇಕು.

ಸರ್ವೋತ್ತಮೋ ಹರಿರ್ನಿತ್ಯಂ ಮಧ್ವೋ ಜೀವೋತ್ತಮೋತ್ತಮಃ ।
ಶೇಷಾದಿಸರ್ವಜೀವಾನಾಂ ತತ್ತಚ್ಛಕ್ತಿಪ್ರದಾಯಕಃ ॥ ೭೨ ॥

ಶ್ರೀಹರಿಯು ಸದಾ ಸರ್ವೋತ್ತಮನು; ಶ್ರೀಮಧ್ವರು ಜೀವರಲ್ಲಿ ಉತ್ತಮೋತ್ತಮರು; ಇವರು ಶೇಷಾದಿ ಸಕಲ ಜೀವರಿಗೂ ಅವರವರಿಗೆ ಉಚಿತವಾದ ಶಕ್ತಿಯನ್ನು ನೀಡಿರುವವರು.

ರುದ್ರಶೇಷಾದಿಸಜ್ಜೀವಾ ಮಧ್ವಶಾಸ್ತ್ರಂ ಪುನಃ ಪುನಃ ।
ಶೃಣ್ವಂತಿ ಸಾದರಾನ್ನಿತ್ಯಂ ತೇನ ಮುಕ್ತಿಮವಾಪ್ನುಯುಃ ॥ ೭೩ ॥

ರುದ್ರ ಶೇಷಾದಿ ಸಜ್ಜೀವರುಗಳು ಮಧ್ವಶಾಸ್ತ್ರವನ್ನು ಆದರದಿಂದ ಮತ್ತೆಮತ್ತೆ ನಿತ್ಯವೂ ಶ್ರವಣಮಾಡುವರು ; ಅದರಿಂದ ಮುಕ್ತಿಯನ್ನೂ ಸಾಧಿಸುವರು. (ಸ್ವತಃ ಶೇಷದೇವರು ಸನಕಾದಿಗಳ ಸಮೇತ ಶ್ರೀಮಧ್ವರ ಪ್ರವಚನವನ್ನು ಕೇಳಲು ಆಗಮಿಸುತ್ತಿದ್ದ ಉಲ್ಲೇಖ ಸುಮಧ್ವವಿಜಯದಲ್ಲಿದೆ).

ವಾಸುದೇವಾಜ್ಞಯಾ ತೇಽಪಿ ಸದಾ ಮಧ್ವವಶೇ ಸ್ಥಿತಾಃ ।
ಮಧ್ವದೇವಪ್ರತೀಪಂ ತುಂ ನ ಕುರ್ವಂತಿ ಕದಾಚನ ॥ ೭೪ ॥

ವಾಸುದೇವನ ಆಣತಿಯಂತೆ ಅವರೆಲ್ಲ ಸದಾ ಮಧ್ವರ ವಶವರ್ತಿಗಳಾಗಿರುವರು; ಅವರೆಂದೂ ಮಧ್ವರಿಗೆ ವಿರೋಧವನ್ನು ಮಾಡುವುದೇ ಇಲ್ಲ. (ಶ್ರೀಮಧ್ವಭಕ್ತರಿಗೆ ರುದ್ರಾದಿದೇವತೆಗಳ ಅನುಗ್ರಹವೂ ಲಭಿಸುವುದು ಎಂದು ಭಾವ).

ಗಾಯಂತ್ಯದ್ಯಾಪಿ ವೇದಾಶ್ಚ ಮಧ್ವಂ ನಾರಾಯಣಾಜ್ಞಯಾ ।
ಪುನರಾವರ್ತನಂ ಮಧ್ವಮಾಶ್ರಿತಾನಾಂ ಕುತಃ ಪ್ರಭೋ ॥ ೭೫ ॥

ನಾರಾಯಣನ ಆದೇಶದಿಂದ ವೇದಗಳೂ ಮಧ್ವರನ್ನು ಹಾಡಿ ಹೊಗಳುತ್ತವೆ. (ಅಂತಹ) "ಮಧ್ವರನ್ನು ಆಶ್ರಯಿಸಿದವರಿಗೆ ಸಂಸಾರಕ್ಕೆ ಮರಳಿ ಬರುವ ಪ್ರಸಕ್ತಿಯೇ ಇರುವುದಿಲ್ಲ." (ಬಳಿತ್ಥಾಸೂಕ್ತ, ಪವಮಾನ ಮಂಡಲ ಮೊದಲಾದ ವೇದಭಾಗಗಳು ಶ್ರೀ ಮಧ್ವಪ್ರತಿಪಾದಕವೆಂಬುದು ಪ್ರಾಜ್ಞಸಂಮತವೇ ಆಗಿದೆ).

ಭಾರತೀರಮಣೋ ಮಧ್ವಃ ಸೃಷ್ಟಿಸ್ಥಿತ್ಯಂತಕಾರಕಃ ।
ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ॥ ೭೬ ॥

ಭಾರತೀರಮಣನಾದ ವಾಯುವೇ ಆದ ಶ್ರೀಮಧ್ವಾಚಾರ್ಯರು ಶ್ರೀಹರಿಯಾಜ್ಞೆಯಿಂದ (ಜಗತ್ತಿನ) ಸೃಷ್ಟಿ ಸ್ಥಿತಿ ನಾಶಗಳನ್ನು ಮಾಡಬಲ್ಲ ಸಮರ್ಥರು ; ಅವರು ಸದಾ ದುಷ್ಟರ ಪಾಲಿಗೆ ಪ್ರಾಣಘಾತಕರೂ ಆಗಿರುವರು.

***ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ।**
ಶ್ರೀಮಧ್ವನಾಮಗ್ರಹಣಮಶೇಷಾಘಹರಂ ವಿದುಃ ॥ ೭೭ ॥

ಸಾಂಕೇತ್ಯ, ಪರಿಹಾಸ, ಅವಜ್ಞೆ ಮೊದಲಾದ ಯಾವ ನಿಮಿತ್ತದಿಂದಲೇ ಆಗಲಿ ಶ್ರೀಮಧ್ವರ ಹೆಸರನ್ನು ಹೇಳುವುದು ಸಕಲ ಪಾಪಗಳ ಪರಿಹಾರಕ್ಕೆ ಸಾಧನ (ಶ್ರೀಹರಿನಾಮವು ತಾರಕವಾಗಿರುವಂತೆ ಮಧ್ವನಾಮವೂ ತಾರಕ ; ಇನ್ನೊಬ್ಬರನ್ನು ಹಾಸ್ಯ

---

* ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ।
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ ॥ —ಭಾಗವತ(6/2/14)

ಮಾಡುವ, ನಿಂದಿಸುವ ಯಾವ ಕಾರಣದಿಂದಲೇ ಆಗಲಿ ಮಧ್ವರನ್ನು ಭಕ್ತಿಯಿಂದ ಸ್ಮರಿಸುವುದು ಎಂದರೆ ಸಕಲ ಪಾಪಗಳನ್ನು ಕಳೆದುಕೊಳ್ಳುವುದು ಎಂದೇ ಅರ್ಥ).

ಅಸ್ಮೃತ್ವಾ ಪ್ರಥಮಂ ಮಧ್ವಂ ವಾಸುದೇವಂ ಸ್ಮರೇದ್ಧಿ ಯಃ ।
ನಿಷ್ಫಲಂ ತು ಭವೇತ್ ತಚ್ಚ ವಂಧ್ಯಾಸ್ತ್ರೀಮೈಥುನಂ ಯಥಾ ॥ ೭೮ ॥

ಮೊದಲಿಗೆ ಮಧ್ವರನ್ನು ಸ್ಮರಿಸದೆ ಹರಿಯನ್ನು ಸ್ಮರಿಸುವುದು, ಬಂಜೆ ಸ್ತ್ರೀಯ ಸಂಗದಂತೆ ನಿರರ್ಥಕ.

ವಾಸುದೇವಂ ಸ್ಮಾರಯಿತ್ವಾ ಮಧ್ವದೇವಂ ತು ನ ಸ್ಮರೇತ್ ।
ತೇನ ಮುಕ್ತಿರ್ಹಿ ನ ಭವೇದ್ ವ್ಯಥಾ ಕಂಠಸ್ಯ ಶೋಷಣಮ್ ॥ ೭೯ ॥

ಮಧ್ವದೇವನನ್ನು ಸ್ಮರಿಸದೆ ಬರೀ ವಾಸುದೇವನನ್ನು ಸ್ಮರಿಸುವುದರಿಂದ ಎಂದೂ ಮುಕ್ತಿಯು ದೊರೆಯದು ; ಅದು ಬರೀ ಕಂಠಶೋಷಣೆಯೇ ಸರಿ.

ತಸ್ಮಾನ್ಮಧ್ವಸ್ಯ ನಾಮ್ನಾ ಹಿ ಸಹಿತಂ ನಾಮ ಚ ಸ್ಮರೇತ್ ।
ನಾರಾಯಣಸ್ಯ ವಿಪ್ರೋ ಹಿ ತಸ್ಯ ಮುಕ್ತಿರ್ಭವೇದ್ಧ್ರುವಮ್ ॥ ೮೦ ॥

ಆದ್ದರಿಂದ ವಿಪ್ರನು ಮಧ್ವರ ಹೆಸರಿನ ಸಮೇತವಾಗಿಯೇ ನಾರಾಯಣನ ನಾಮವನ್ನು ಸ್ಮರಿಸಬೇಕು ; ಅದರಿಂದ ಮುಕ್ತಿ ಲಭಿಸುವುದು ಖಚಿತ.

ಮಧ್ವಾಖ್ಯಕಲ್ಪವೃಕ್ಷಸ್ಯ ದೂಷಕಾ ಯೇತು ಮಾಯಿನಃ ।
ತೇಷಾಂ ವೈ ಭೂಷಕಾ ಯೇ ತು ತೇಽಪಿ ಯಾಂತ್ಯಧರಂ ತಮಃ ॥ ೮೧ ॥

ಮಧ್ವರು ಕಲ್ಪವೃಕ್ಷ ; ಅವರನ್ನು ದೂಷಿಸುವ ಮಾಯಿಗಳನ್ನು ಪ್ರಶಂಸಿಸುವವರೂ ಸಹ ಅಂಧಂತಮಸ್ಸಿಗೇ ತೆರಳುವರು.

ಕಾಯೇನ ಮನಸಾ ವಾಚಾ ಶ್ರೀಮಧ್ವಗುರು(ಮಧ್ವರಾಜಸ್ಯ)ದೂಷಕಾಃ ।
ತೇಷಾಂ ವೈ ಭೂಷಕಾ (ವಾಚಾ) ಯೇ ವೈ ತೇಽಪಿ ಯಾಂತ್ಯಧರಂ ತಮಃ

ಮಾತು, ಮನಸ್ಸು ಮತ್ತು ಕೃತಿಗಳಿಂದ ಶ್ರೀಮಧ್ವರನ್ನು ನಿಂದಿಸುವ ಜನರನ್ನು ಪ್ರತಿಭಟಿಸದ ಜನರೆಲ್ಲ ತಮಸ್ಸಿಗೇ ತೆರಳುವರು.

ಮಧ್ವಾಖ್ಯಕಾಮಧೇನೋಶ್ಚ ದೂಷಕಾ ಮಾಯಿಗರ್ದಭಾಃ ।
ತೇಷಾಂ ದರ್ಶನಮಾತ್ರೇಣ ಪಾತಿತ್ಯಂ ಜ್ಞಾನಿನೋಽಪಿ ಹಿ ॥ ೮೩ ॥

ಮಧ್ವರು ಕಾಮಧೇನು ; ಅವರನ್ನು ದೂಷಿಸುವ ಮಾಯಿಗಳು ಗರ್ದಭರೇ ಸರಿ ; ಅಂತಹವರ ದರ್ಶನದಿಂದ ಜ್ಞಾನಿಗಳಿಗೂ ಪಾತಿತ್ಯ ತಪ್ಪಿದ್ದಲ್ಲ.

ಮಧ್ವಸ್ಯ ದ್ವೇಷಿಣೋ ವಿಪ್ರಾಶ್ಚಂಡಾಲಾದಧಮಾಃ ಸ್ಮೃತಾಃ ।
ತೇಷಾಂ ಸಂಭಾಷಣಸ್ಪರ್ಶೌ ವರ್ಜಯೇಚ್ಚ ವಿಚಕ್ಷಣಃ ॥ ೮೪ ॥

ಮಧ್ವದ್ವೇಷಿಗಳಾದ ವಿಪ್ರರು ಚಂಡಾಲರಿಗಿಂತಲೂ ಅಧಮರೆನ್ನಿಸುವರು; ವಿವೇಕಿಯಾದವನು ಅವರೊಂದಿಗೆ ಸಂಭಾಷಣ ಮತ್ತು ಸ್ಪರ್ಶ ಎರಡನ್ನೂ ತೊರೆಯಬೇಕು.

ಮಧ್ವಸ್ಯ ದ್ವೇಷಿಣೋಽನ್ನಂ ತು ಭುಂಜತೇ ಯೇ ನರಾಧಮಾಃ ।
ಅವಲೋಕ್ಯ ಮುಖಂ ತೇಷಾಮಾದಿತ್ಯಮವಲೋಕಯೇತ್ ॥ ೮೫ ॥

ಮಧ್ವದ್ವೇಷಿಗಳ ಅನ್ನವನ್ನು ತಿನ್ನುವವರು ನರಾಧಮರು ; ಅವರ ಮುಖವನ್ನು ನೋಡಿದರೆ, ಸೂರ್ಯಮಂಡಲವನ್ನು ಅವಲೋಕಿಸಬೇಕು.

ಮಧ್ವಸ್ಯ ದ್ವೇಷಿಣೋ ದ್ರವ್ಯಂ ಕಾಂಕ್ಷಂತೇ ಯೇ ನರಾಧಮಾಃ ।
ತೇಽಪಿ ಯಾಂತಿ ತಮೋ ಘೋರಂ ನಾತ್ರ ಕಾರ್ಯಾ ವಿಚಾರಣಾ॥ ೮೬ ॥

ಮಧ್ವದ್ವೇಷಿಗಳಿಂದ ದ್ರವ್ಯವನ್ನು ಅಪೇಕ್ಷಿಸುವವರು ನರಾಧಮರು ; ಅವರೂ ಸಹ ಘೋರವಾದ ತಮಸ್ಸಿಗೇ ತೆರಳುವರು ; ಸಂಶಯವಿಲ್ಲ.

ಮಧ್ವಸ್ಯ ದ್ವೇಷಿಣಂ ಯಸ್ತು ಯಾಚತೇ ವೈ ನರಾಧಮಃ ।
ಸದ್ಯೋ ಭವತಿ ಮೂಢಾತ್ಮಾ ಬ್ರಾಹ್ಮಣ್ಯಾಚ್ಚ ಚ್ಯುತೋ ಭವೇತ್॥ ೮೭ ॥

ಮಧ್ವರ ದ್ವೇಷಿಗಳನ್ನು ಬೇಡುವವನೂ ನರಾಧಮನೇ ಸರಿ ; ಅವನು ತಕ್ಷಣವೇ ಮೂಢಾತ್ಮನಾಗುವನು ; ಬ್ರಾಹ್ಮಣ್ಯದಿಂದ ಪತಿತನೂ ಆಗುವನು.

ಮಧ್ವಸ್ಯ ದ್ವೇಷಿಣೋ ವಿತ್ತಂ ನ ಯಾಚೇತ ದ್ವಿಜೋತ್ತಮಃ ।
ಸಂಪ್ರಾಪ್ತೇ ಮರಣೇ ವಾಽಪಿ ಅನ್ಯಥಾ ನರಕಂ ವ್ರಜೇತ್ ॥ ೮೮ ॥

ಮರಣ ಒದಗಿದರೂ ಸರಿ, ಮಧ್ವರ ದ್ವೇಷಿಗಳ ಬಳಿ ದ್ವಿಜೋತ್ತಮನು ಎಂದೂ ಬೇಡಕೂಡದು ; ತಪ್ಪಿದಲ್ಲಿ ನರಕವನ್ನು ಸೇರಬೇಕಾಗುವುದು.

***ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಮ್ ।**
ವರಂ ಹತ್ಯಾ ಸುರಾಪಾನಂ ಮಧ್ವಸ್ಯ ದ್ವೇಷಿವಂದನಾತ್ ॥ ೮೯ ॥

ಸ್ವಮಾತೃಗಮನ, ಗೋಮಾಂಸಭಕ್ಷಣ, ಬ್ರಹ್ಮಹತ್ಯೆ, ಮದ್ಯಪಾನಗಳು ಮಧ್ವದ್ವೇಷಿಗೆ ವಂದಿಸುವುದಕ್ಕಿಂತ ಉತ್ತಮ.

ಸ ಬ್ರಹ್ಮಹಾ ಸ ಗೋಘ್ನಶ್ಚ ಸ್ತೇನಃ ಸ ಗುರುತಲ್ಪಗಃ ।
ಮಿತ್ರದ್ರೋಹೀ ಸ ಏವ ಸ್ಯಾನ್ಮಧ್ವಸ್ಯ ದ್ವೇಷ್ಯ(ಷಿ ಭೂ)ದೂಷಕಃ ॥ ೯೦ ॥

ಮಧ್ವದ್ವೇಷಿಗಳನ್ನು ಪ್ರತಿಭಟಿಸದೇ ಬ್ರಹ್ಮಹತ್ಯೆ, ಗೋಹತ್ಯೆ, ಕಳ್ಳತನ, ಗುರುತಲ್ಪಗಮನ, ಮಿತ್ರದ್ರೋಹ ಮೊದಲಾದ ಸಕಲಪಾಪಗಳನ್ನು ಮಾಡಿದವನೇ ಸರಿ.

ಚಂಡಾಲೋಽಪಿ ನ ಚಂಡಾಲೋ ಮಾತೃಗಾಮೀ ನ ದೋಷಭಾಕ್ ।
ಚಂಡಾಲಃ ಸ ತು ವಿಜ್ಞೇಯೋ ಮಧ್ವಸ್ಯ ದ್ವೇಷ್ಯ(ಷಿಭೂ)ದೂಷಕಃ ॥೯೧॥

ಚಂಡಾಲನು ಚಂಡಾಲನಲ್ಲ ; ಮಾತೃಗಾಮಿಯೂ ದೋಷಿಯಿಲ್ಲ : ಆದರೆ ಮಧ್ವದ್ವೇಷಿಗಳನ್ನು ಪ್ರತಿಭಟಿಸದವನು ಮೆಚ್ಚುವವನು ಮಾತ್ರ ಚಂಡಾಲನೇ ಸರಿ.

---

* ವರಂ ಸ್ವಮಾತೃಗಮನಂ ವರಂ ಗೋಮಾಂಸಭಕ್ಷಣಮ್ ।
ವರಂ ಹತ್ಯಾ ಸುರಾಪಾನಮೇಕಾದಶ್ಯನ್ನಭಕ್ಷಣಾತ್ ॥ —(ಕೃ.ಮ.)

ಸ್ವರ್ಣಸ್ತೇಯೀ ನ ವಧ್ಯೋ ಹಿ ತಥಾ ದ್ರವ್ಯಾಪಹಾರಕಃ ।
ಮೂಢಾತ್ಮಾ ಸ ತು ವಧ್ಯೋ ಹಿ ಮಧ್ವಸ್ಯ ದ್ವೇಷಿಭೂಷಣ(ಕ)ಃ ॥ ೯೨ ॥

ಚಿನ್ನ ಕದ್ದವನನ್ನು ಕೊಲ್ಲಬೇಕಿಲ್ಲ ; ಹಾಗೆಯೇ ದ್ರವ್ಯ ಕದ್ದವನನ್ನು ಸಹ ; ಮಧ್ವದ್ವೇಷಿಗಳನ್ನು ಮೆಚ್ಚುವ ಮೂರ್ಖನು ಮಾತ್ರ ವಧ್ಯನೇ ಸರಿ.

[1]ಮಧ್ವಸ್ಯ ದ್ವೇಷಿಣೋ ನಿತ್ಯಂ ತಮೋ ಯಾಂತಿ ನ ಸಂಶಯಃ ।
ತತೋಽಧಿಕಂ ತಮೋ ಯಾಂತಿ ವಿಪ್ರಾಸ್ತೇಷಾಮನಿಂದಕಾಃ ॥ ೯೩ ॥

ಮಧ್ವರ ದ್ವೇಷಿಗಳು ತಮಸ್ಸಿಗೆ ಹೋಗುವುದು ಖಚಿತ ; ಅವರಿಗಿಂತಲೂ ಹೆಚ್ಚಿನ ತಮಸ್ಸಿಗೆ ಅವರನ್ನು ಪ್ರತಿಭಟಿಸದ ವಿಪ್ರರು ತೆರಳುವರು.

ಪರಾಂಗನಾಯಾಂ ನಿರತೋ ನ ವಧ್ಯೋ ರಾಜಭಿರ್ನರಃ ।
ವಧ್ಯೋ ಭವತಿ ಮೂಢಾತ್ಮಾ ಶ್ರೀಮಧ್ವದ್ವೇಷಿಭೂಷಕಃ ॥ ೯೪ ॥

ರಾಜರುಗಳು ಪರಸ್ತ್ರೀನಿರತರನ್ನು ಕೊಲ್ಲಿಸಬೇಕಿಲ್ಲ ; ಆದರೆ ಮಧ್ವದ್ವೇಷಿಗಳನ್ನು ಹೊಗಳುವ ಮೂರ್ಖನು ಮಾತ್ರ ಅವರಿಂದ ವಧ್ಯನೇ ಸರಿ.

ಯದ್ದಿನಂ ಮಧ್ವ(ಹರಿ)ಸಲ್ಲಾಪಕಥಾಪೀಯೂಷವರ್ಜಿತಮ್ ।[2]
ತದ್ದಿನಂ ದುರ್ದಿನಂ ಮನ್ಯೇ ಮೇಘಚ್ಛನ್ನಂ ನ ದುರ್ದಿನಮ್ ॥ ೯೫ ॥

ಮೋಡಕವಿದ ದಿನ ದುರ್ದಿನವಲ್ಲ ; ಹರಿಮಧ್ವಸಲ್ಲಾಪದ ಕಥೆಯು ಅಮೃತದಿಂದ ದೂರಾದ ದಿನವೇ ನಿಜವಾದ ದುರ್ದಿನ.

ಯದ್ದಿನಂ ಮಧ್ವರಾಜಸ್ಯ ದ್ವೇಷಿದೂಷಣವರ್ಜಿತಮ್ ।
ತದ್ದಿನಂ ದುರ್ದಿನಂ ಮನ್ಯೇ ಮೇಘಚ್ಛನ್ನಂ ನ ದುರ್ದಿನಮ್ ॥ ೯೬ ॥

ಮಧ್ವರಾಜರ ದ್ವೇಷಿಗಳನ್ನು ಪ್ರತಿಭಟಿಸದ ದಿನವೇ ದುರ್ದಿನ ; ಮೋಡಕವಿದ ದಿನ ದುರ್ದಿನವಲ್ಲ

ಕಿಮತ್ರ ಬಹುನೋಕ್ತೇನ ಪುರಾಣೇಷು ಸ್ಮೃತಿಷ್ವಪಿ ।
ಮುಕ್ತಿಯೋಗ್ಯಾ ಮಧ್ವಭಕ್ತಾಸ್ತಮೋ ಯೋಗ್ಯಾಸ್ತು ಮಾಯಿನಃ ॥ ೯೭ ॥

ಹೆಚ್ಚೇನು ; "ಮಧ್ವಭಕ್ತರೆಲ್ಲ ಮುಕ್ತಿಯೋಗ್ಯರು ; ಮಾಯಿಗಳೆಲ್ಲ ತಮೋಯೋಗ್ಯರು".ಎಂದೇ ಸ್ಮೃತಿಗಳು ಮತ್ತು ಪುರಾಣಗಳು ಸಾರಿವೆ.

---

1 ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ ॥
—ಈಶಾವಾಸ್ಯೋಪನಿಷತ್

2 ಮಧ್ವರಾಯರ ಸ್ಮರಣೆ ಮಾಡದವ ಧರೆಯೊಳಗೆ
ಇದ್ದರೇನು ಇಲ್ಲದಿದ್ದರೇನೇ ?
—ಶ್ರೀವಿಜಯದಾಸರು

ವಿದ್ಯಾರಂಭೇ ವಿವಾಹೇ ಚ ಕೃಷ್ಯಾರಂಭೇ ತಥೈವ ಚ ।
ರಾಜದ್ವಾರೇ ಸಭಾಮಧ್ಯೇ ಪ್ರಾಜ್ಞಂ ಮಧ್ವಂ ಚ ಸಂಸ್ಮರೇತ್ ॥ ೯೮ ॥

ವಿದ್ಯಾರಂಭ, ವಿವಾಹ, ಕೃಷಿಯ ಆರಂಭ, ರಾಜದರ್ಶನ, ಸಭಾಕಲಾಪ, ಹೀಗೆ ಸಕಲಕಾರ್ಯಗಳಲ್ಲೂ ಪೂರ್ಣಪ್ರಜ್ಞರಾದ ಮಧ್ವರನ್ನು ಸ್ಮರಿಸಬೇಕು.

ಕದಾಚಿನ್ಮಧ್ವಭಕ್ತಸ್ಯ ಪಾತಕಂ(ಸ್ತು) ಘಟ(ಕುರು)ತೇ ಯದಿ ।
ಯಮಸ್ತಂ ನೇಕ್ಷಿತುಂ ಶಕ್ತಃ ಶ್ರೀಮಧ್ವಗುರುಶಾಸನಾತ್ ॥ ೯೯ ॥

ಮಧ್ವಭಕ್ತನಿಂದ ಒಂದು ವೇಳೆ ಅಪಚಾರ ಘಟಿಸಿದರೂ, ಯಮನು ಅವರನ್ನು ನೋಡಲು ಶಕ್ತನಾಗಲಾರ ; ಹಾಗೆಂದೇ ಮಧ್ವಶಾಸನವಿದೆ.

ಮಧ್ವರಾಜಂ ಸಮಾಶ್ರಿತ್ಯ ತಿಷ್ಠಂತಿ ಯಮಪೂರ್ವಕಾಃ ।
ಅತಸ್ತಂ ನೇಕ್ಷಿತುಂ ಶಕ್ತಾಃ ಕ್ರೂರಾ ಯಮಭಟಾ ಅಪಿ ॥ ೧೦೦ ॥

ಯಮನೇ ಮೊದಲಾದವರು ಮಧ್ವರಾಜರನ್ನು ಆಶ್ರಯಿಸಿಯೇ ಜೀವಿಸಿರುವರು ; ಆದ್ದರಿಂದ ಅವರಾಗಲಿ ಕ್ರೂರಿಗಳಾದ ಯಮಭಟರಾಗಲಿ ಮಧ್ವಭಕ್ತರನ್ನು ನೋಡಲೂ ಶಕ್ತರಾಗಲಾರರು.

ಮಧ್ವಶಾಸ್ತ್ರವಿದೋ ವಿಪ್ರಾ ಯಂ ಯಂ ಪಶ್ಯಂತಿ ಚಕ್ಷುಷಾ ।
ತಂ ತಂ ಶುದ್ಧಂ ವಿಜಾನೀಯಾನ್ನಾತ್ರ ಕಾರ್ಯಾ ವಿಚಾರಣಾ ॥ ೧೦೧ ॥

[1]ಮಧ್ವಶಾಸ್ತ್ರಬಲ್ಲ ವಿಪ್ರರು ಕಣ್ಣಿಂದ ನೋಡಿದ್ದೆಲ್ಲವನ್ನು 'ಪರಿಶುದ್ಧ' ಎಂದು ಪರಿಗಣಿಸಬೇಕು ; ಈ ಬಗ್ಗೆ ಸಂದೇಹವೇ ಬೇಡ.

[2]ನಿತ್ಯೋತ್ಸವೋ ಭವೇತ್ ತೇಷಾಂ ನಿತ್ಯಶ್ರೀರ್ನಿತ್ಯಮಂಗಲಮ್ ।
ಯೇಷಾಂ ಹೃದಿಸ್ಥೋ ಭಗವಾನ್ ಮಧ್ವಃ ಪಾಪೌಘನಾಶನಃ ॥ ೧೦೨ ॥

ಪಾಪರಾಶಿಯನ್ನು ಕಳೆಯಬಲ್ಲ ಪೂರ್ಣವಾದ ಗುಣಗಳಿಂದ ತುಂಬಿರುವ ಶ್ರೀಮಧ್ವರು ಯಾರ ಹೃದಯದಲ್ಲಿ ನೆಲೆಸಿರುವರೋ ಅವರಿಗೆಲ್ಲ ನಿತ್ಯೋತ್ಸವ, ನಿತ್ಯಶ್ರೀ, ಮತ್ತು ನಿತ್ಯ ಮಂಗಲಗಳು ಖಚಿತ.

ಮಧ್ವಭಕ್ತಂ ತು ಸಂಸ್ಮೃತ್ಯ ನರಕಸ್ಥಾ ಜನಾಃ ಪ್ರಭೋ ।
ಯಾಮ್ಯಂ ಚ ನರಕಂ ತ್ಯಕ್ತ್ವಾ ಮೋಕ್ಷಮಾರ್ಗಮವಾಪ್ನುಯುಃ ॥೧೦೩॥

ಮಧ್ವಭಕ್ತರನ್ನು ಸ್ಮರಿಸಿದರೆ ನರಕದಿಂದ ಬಿಡುಗಡೆಯು ಸಾಧ್ಯ ; ನರಕವನ್ನು ತಪ್ಪಿಸಿಕೊಳ್ಳುವುದರೊಂದಿಗೆ ಮೋಕ್ಷವನ್ನೂ ಅಂತಹವರು ಪಡೆದುಕೊಳ್ಳುವರು.

---

1 ಗೋಪೀಚಂದನಲಿಪ್ತಾಂಗೋ ಯಂ ಯಂ ಪಶ್ಯತಿ ಚಕ್ಷುಷಾ ।
ತಂ ತಂ ಶುದ್ಧಂ ವಿಜಾನೀಯನ್ನಾತ್ರ ಕಾರ್ಯಾ ವಿಚಾರಣಾ ॥ —(ಕೃ.ಮ.)

2 ನಿತ್ಯೋತ್ಸವೋ ಭವೇತ್ ತೇಷಾಂ ನಿತ್ಯಶ್ರೀರ್ನಿತ್ಯಮಂಗಲಮ್ ।
ಯೇಷಾಂ ಹೃದಿಸ್ಥೋ ಭಗವಾನ್ ಮಂಗಲಾಯತನೋ ಹರಿಃ ॥ —(ಕೃ.ಮ.)

ಯೇ ಜನಾ ಮಾರುತಂ ಮಧ್ವಂ ಸೇವಂತೇ ಮೋಕ್ಷಕಾಮುಕಾಃ ।
ತೇ ಜನಾಃ ಪ್ರಾಪ್ನುವಂತ್ಯೇವ ಮಧ್ವರಾಜಸ್ಯ ಶಾಸನಾತ್ ॥ ೧೦೪ ॥

ವಾಯುದೇವರ ಅವತಾರರಾದ ಶ್ರೀಮಧ್ವರನ್ನು ಸೇವಿಸುವವರೆಲ್ಲ ಜ್ಞಾನಿಗಳಾಗಿ ಅವರ ಆದೇಶದಂತೆ ಮೋಕ್ಷವನ್ನೇ ಪಡೆಯುವರು.

ಲೋಕಸ್ಯ ಸದ್ಗುರುಂ ಮಧ್ವಂ ಯೇ ದ್ವಿಷಂತಿ ನರಾಧಮಾಃ ।
ತಾನ್ ನರಾನ್ ಶ್ವಾನವದ್ ಬದ್ಧ್ವಾ ಪ್ರಹರೇಚ್ಚ ವಿಚಕ್ಷಣಃ ॥ ೧೦೫ ॥

ವಿಶ್ವಕ್ಕೆ ಸದ್ಗುರುವಾದ ಮಧ್ವರನ್ನು ದ್ವೇಷಿಸುವ ನರಾಧಮರನ್ನು ಜ್ಞಾನಿಗಳು ನಾಯಿಗಳಂತೆ ಕಟ್ಟಿ ಒದೆಯುವರು.

[1]ಯನ್ನರಂ ಮಧ್ವರಾಜಸ್ತು ನ ಗೃಹ್ಣಾತಿ ಹರಿಪ್ರಿಯಃ ।
ತಂ ನರಂ ನೃಹರಿಃ ಸಾಕ್ಷಾನ್ನ ಚ ಗೃಹ್ಣಾತಿ(ಹಿ) ವಾಲಿವತ್[2] ॥ ೧೦೬ ॥

ಹರಿಪ್ರಿಯರಾದ ಮಧ್ವರಾಜರು ಸ್ವೀಕರಿಸದ ಜನರನ್ನು ಶ್ರೀಹರಿಯು ಸಹ ಸ್ವೀಕರಿಸಲಾರನು ; ಹನುಮಂತನು ತೊರೆದ ವಾಲಿಯನ್ನು ರಾಮದೇವರು ತೊರೆಯಲಿಲ್ಲವೆ ?

ದುಷ್ಟಕಂ ಚ ನರಂ ಮಧ್ವಃ ಸ್ವೀಕರೋತಿ ಯದಾ ಗುರುಃ ।
ಸುಗ್ರೀವಮಿವ ತಂ ಶ್ರೀಶಃ ಸ್ವೀಕರೋತಿ ನ ಸಂಶಯಃ ॥ ೧೦೭ ॥

ಗುರುಗಳಾದ ಮಧ್ವರಾಜರು ಸ್ವೀಕರಿಸುವ ನರನನ್ನು ಸುಗ್ರೀವನನ್ನು ಹೇಗೋ ಹಾಗೆ ಶ್ರೀಹರಿಯು ಸ್ವೀಕರಿಸುವನು ; ಸಂಶಯವೇ ಇಲ್ಲ.

---

1 ಹನುಮನ ನಂಬದ ವಾಲಿಯು ಬಿದ್ದ ।
ಹನುಮನ ನಂಬಿದ ಸುಗ್ರೀವನು ಗೆದ್ದ ॥ —ಶ್ರೀಪುರಂದರದಾಸರು

2 ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ
ತತ್ರೈವ ವಾಯುರಿತಿ ವೇದವಚಃ ಪ್ರಸಿದ್ಧಮ್ ।
ಕಸ್ಮಿನ್ ವಹಂತ್ಯಿತಿ ತಥೈವ ಹಿ ಸೋಽವತಾರೇ
ತಸ್ಮಾತ್ ಸ ಮಾರುತಿಕೃತೇ ರವಿಜಂ ರರಕ್ಷ ॥
ಏವಂ ಸ ಕೃಷ್ಣತನುರರ್ಜುನಮಪ್ಯರಕ್ಷತ್
ಭೀಮಾರ್ಥಮೇವ ತದರಿಂ ರವಿಜಂ ನಿಹತ್ಯ ।
ಪೂರ್ವಂ ಹಿ ಮಾರುತಿಮವಾಪ ರವೇಃ ಸುತೋಽಯಂ
ತೇನಾಸ್ಯ ವಾಲಿನಮಹನ್ ರಘುಪಃ ಪ್ರತೀಪಮ್ ॥
ಏವಂ ಸುರಾಶ್ಚ ಪವನಸ್ಯ ವಶೇ ಯತೋಽತಃ
ಸುಗ್ರೀವಮತ್ರ ತು ಪರತ್ರ ಚ ಶಕ್ರಸೂನುಮ್ ।
ಸರ್ವೇ ಶ್ರಿತಾ ಹನುಮತಸ್ತದನುಗ್ರಹಾಯ
ತತ್ರಾಗಮದ್ರಘುಪತಿಃ ಸಹ ಲಕ್ಷ್ಮಣೇನ ॥ —ಮ.ಭಾ.ತಾ.ನಿ. 5/46-48

ಉದಾಸ್ತೇ ತು ನರಂ ಯಂ ವೈ ಮಧ್ವೋ ಹಿ ಜಗತಾಂ ಗುರುಃ ।
ಉದಾಸ್ತೇ ತಂ ಹರಿರಪಿ ದುರ್ಜನಂ ಭಕ್ತವತ್ಸಲಃ ॥ ೧೦೮ ॥

ಮೂರುಲೋಕದ ಗುರುಗಳಾದ ಶ್ರೀಮಧ್ವರು ಯಾವನನ್ನು ಉಪೇಕ್ಷಿಸುವರೋ ಅಂತಹನನನ್ನು ಭಕ್ತವತ್ಸಲನಾದ ಶ್ರೀಹರಿಯು ಸಹ ಉಪೇಕ್ಷಿಸುವನು.

ಯೋ ದ್ವೇಷ್ಟಿ ನೃಹರಿಪ್ರೇಷ್ಠಂ ಶ್ರೀಮಧ್ವಂ ದುಷ್ಟಭೀಷಣಮ್ ।
ಸ ಹರೇರ್ನ ಪ್ರಿಯೋ ರುದ್ರದೇವಾದೇಶ್ಚ ಪತತ್ಯಧಃ ॥ ೧೦೯ ॥

ನರಹರಿಗೆ ಅತ್ಯಂತ ಪ್ರಿಯರಾದ ದುಷ್ಟರಿಗೆ ಭಯಂಕರರಾದ ಶ್ರೀಮಧ್ವರನ್ನು ದ್ವೇಷಿಸುವ ಕಪಟಿಯು ಶ್ರೀಹರಿಗಾಗಲಿ,ರುದ್ರಾದಿದೇವತೆಗಳಿಗಾಗಲಿ ಪ್ರಿಯನಾಗನು.

ಶೇಷಾದಿಭ್ಯೋ ವರಂ ಮಧ್ವಮುದಾಸ್ತೇ ಯೋ ನರಃ ಸದಾ ।
ಸ ಮಧ್ಯಮೋ ನರೋ ಜ್ಞೇಯಸ್ತಸ್ಯ ಮಿಶ್ರಫಲಂ ಭವೇತ್ ॥ ೧೧೦ ॥

ಶೇಷಾದಿದೇವತೆಗಳಿಗಿಂತ ಉತ್ತಮರಾದ ಶ್ರೀಮಧ್ವರನ್ನು ಉಪೇಕ್ಷಿಸುವ ನರನು ಮಧ್ಯಮನು ; ಅವನಿಗೆ ದೊರೆಯುವುದು ಮಿಶ್ರಫಲವಾದ ನಿತ್ಯ ಸಂಸಾರವೇ ಆಗಿದೆ.

ಯೋ ಭಜೇತ್ ಸತತಂ ಭಕ್ತ್ಯಾ ಮಧ್ವರಾಜಂ ಚ ಸದ್ಗುರುಮ್ ।
ಸ ಕೇಶವಪ್ರಿಯೋ ಭಕ್ತೋಃ ವೈಕುಂಠೇ ಮೋದ(ಭಾಸತೇ)ತೇ ಸದಾ ೧೧೧

ಸದ್ಗುರುವಾದ ಮಧ್ವರಾಜರನ್ನು ಭಕ್ತಿಯಿಂದ ಸತತ ಭಜಿಸುವವನು ಶ್ರೀಕೇಶವನಿಗೆ ಪ್ರಿಯ ಭಕ್ತನೆನ್ನಿಸಿ ಸದಾ ವೈಕುಂಠದಲ್ಲಿ ಆನಂದಿಸುವನು.

***ವ್ಯಾಸದೇವಸ್ಯ ಶಿಷ್ಯೋ ಹಿ ಮಧ್ವೋ ನಾಮ ಮರುತ್ ಪ್ರಭುಃ ।**
ತಸ್ಮಾತ್ ಸ ಏವ ವಂದ್ಯೋ ಹಿ ಸರ್ವದಾ(ಥಾ)ಶುಭ(ಮೋಕ್ಷ)ಮಿಚ್ಛತಾ ॥

ಮಧ್ವರೆಂಬ ಮಹಾಪ್ರಭುಗಳು ಶ್ರೀವೇದವ್ಯಾಸರ ಶಿಷ್ಯರು ; ಆದ್ದರಿಂದ ಒಳಿತನ್ನು ಬಯಸುವವರು ಸದಾ ಅವರನ್ನೇ ವಂದಿಸಬೇಕು ;

ಮಧ್ವದ್ವೇಷೀ ಸಂಕರೋ ಹಿ ತಸ್ಮಿನ್ ವೈ ಸ್ನೇಹವಾನ್ ನರಃ ॥
ಸ್ನೇಹವಾನಪಿ ತದ್ಬಂಧೌ ಮಧ್ವದ್ವೇಷೀ ಸ ನಿಶ್ಚಯಃ ॥ ೧೧೩ ॥

ಸಂಕರನು ಮಧ್ವದ್ವೇಷಿ ; ಅವನಲ್ಲಿ ಸ್ನೇಹಹೊಂದಿದ ನರನು ಸಹ ಮಧ್ವದ್ವೇಷಿಯೇ ಎನ್ನಿಸುವನು.

ಮಧ್ವಸ್ಯ ಲಾಂಛನಂ ಹಿತ್ವಾ ಲಾಂಛನಂ ಸಂಕರಸ್ಯ ಹಿ ।
ಬಿಭ್ರಾಣೋ ವೈ ಸ ಮೂಢಾತ್ಮಾ ಮಧ್ವದ್ವೇಷೀ ಸ (ವಿ)ನಿಶ್ಚಯಃ ॥೧೧೪॥

---

* ಸರ್ವದೇವೋತ್ತಮೋ ವಾಯುರಿತಿ ಜ್ಞಾನಾನ್ನಚಾಪರಮ್ ।
ಪ್ರಿಯಮುಪ್ತ ಹರೇಃ ಕಿಂಚಿತ್ ತಥಾ ವಾಯೋರ್ದರೇರ್ವಿದಃ ॥
—ಇತಿ ಪಾದ್ಮೋಕ್ತೇ (ಭಾಗವತತಾತ್ಪರ್ಯ)

ಮಧ್ವರ ಲಾಂಛನವನ್ನು ತೊರೆದು ಸಂಕರನ ಲಾಂಛನವನ್ನು ಧರಿಸುವವನು ಮೂರ್ಖಾತ್ಮನೆನ್ನಿಸುವನು ; ಅವನು ನಿಶ್ಚಿತವಾಗಿಯು ಮಧ್ವದ್ವೇಷಿಯೇ ಸರಿ.

ಜಲಸ್ಯ ಸ್ನಾನಮಾತ್ರೇಣ ನ ತುಷ್ಯತಿ ಜನಾರ್ದನಃ ।
ತುಷ್ಟೋ ಭವತಿ ಲಕ್ಷ್ಮೀಶಃ ಶ್ರೀಮಧ್ವದ್ವೇಷಿದೂಷಣಾತ್ ॥ ೧೧೫ ॥

ನೀರಿನಲ್ಲಿ ಮಿಂದ ಮಾತ್ರಕ್ಕೆ ಶ್ರೀಹರಿಯು ಪ್ರೀತನಾಗಲಾರನು ; ಅವನು ನಿತ್ಯ ಪ್ರೀತನಾಗುವುದು ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸಿದಾಗಲೇ.

ಮಧ್ವೋಚ್ಛಿಷ್ಟಂ ಸದಾ ಭೋಜ್ಯಂ ಹರೇರಾಜ್ಞಾನುಸಾರತಃ ।
ತಸ್ಮಾನ್ಮಧ್ವಾಯ ಮಹತೇ ದದ್ಯಾದನ್ನಂ ವಿಚಕ್ಷಣಃ ॥ ೧೧೬ ॥

ಶ್ರೀ ಮಧ್ವರ ನೈವೇದ್ಯವನ್ನು ಸದಾ ಸ್ವೀಕರಿಸಬೇಕು. ಹಾಗೆಂದೇ ಶ್ರೀಹರಿಯ ಆದೇಶ ಉಂಟು ; ಅಂತಹ ಮಹಾನುಭಾವರಾದ ಶ್ರೀಮಧ್ವರಿಗೆ ಅನ್ನವನ್ನು ಸಮರ್ಪಿಸಬೇಕು.

ಸರ್ವಭೂತಾತ್ಮಭೂತಾಯ ಮಧ್ವಾಯಾಮಿತತೇಜಸೇ ।
ದೇಯಂ ಶಾಂತಾಯ ಪೂರ್ಣಾಯ ದತ್ತಸ್ಯಾನಂತಮಿಚ್ಛತಾ ॥ ೧೧೭ ॥

ಏನು ಮಾಡಿದ್ದೂ ಅನಂತವಾಗಬೇಕು ಎಂದು ಬಯಸುವವನು, ಸರ್ವಪ್ರಾಣಿಗಳಿಗೂ ಅಂತರ್ಯಾಮಿಗಳೂ, ಒಡೆಯರೂ, ಅಪಾರ ತೇಜಸ್ವಿಗಳೂ, ಪ್ರಶಾಂತರೂ, ಪೂರ್ಣರೂ ಆದ ಶ್ರೀಮಧ್ವರಿಗೇ(ಶ್ರೀಮಧ್ವರ ಮೂಲಕವೇ ಅದನ್ನು ಶ್ರೀಹರಿಗೆ) ಸಮರ್ಪಿಸಬೇಕು.

ಮಧ್ವಸ್ಯ ದ್ವೇಷಿಣಂ ದೃಷ್ಟ್ವಾ ಕರಾಭ್ಯಾಂ ನಮ ಇತ್ಯಪಿ ।
ಬ್ರಾಹ್ಮಣಸ್ಯ ಕರೌ ಛಿತ್ವಾ ಸಿಂಧುಮಧ್ಯೇ ವಿನಿಕ್ಷಿಪೇತ್ ॥ ೧೧೮ ॥

ಶ್ರೀ ಮಧ್ವದ್ವೇಷಿಗಳನ್ನು ಕಂಡು ಕೈಜೋಡಿಸಿ ನಮಸ್ಕಾರವೆನ್ನುವವನ ಕೈಗಳನ್ನು ಕತ್ತರಿಸಿ ಸಾಗರದ ಮಧ್ಯೆ ಎಸೆಯಬೇಕು.

ಅನ್ನಸ್ಯ ದಾನಮಾತ್ರೇಣ ನ ತುಷ್ಯತಿ ಜಗತ್ಪ್ರಭುಃ ।
ತುಷ್ಟೋ ಭವತಿ ಸರ್ವೇಶಃ ಶ್ರೀಮಧ್ವದ್ವೇಷಿದೂಷಣಾತ್ ॥ ೧೧೯ ॥

ತನಗೆ ಅನ್ನವನ್ನು ಸಮರ್ಪಿಸಿದ ಮಾತ್ರಕ್ಕೆ ಶ್ರೀಹರಿಯು ಪ್ರೀತನಾಗಲಾರನು; ಸರ್ವೇಶನಾದ ಅವನು ಮೆಚ್ಚುವುದು ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸಿದಾಗಲೇ.

ವೇಶ್ಯಾಲಯೇ ವಸೇದ್ವಿಪ್ರೋ ಹಿಂಸಕಸ್ಯ ಗೃಹೇಽಪಿ ವಾ ।
ನ ವಸೇನ್ಮಧ್ವತತ್ತ್ವಜ್ಞಃ ಶ್ರೀಮಧ್ವದ್ವೇಷಿಸದ್ಮನಿ ॥ ೧೨೦ ॥

ಮಧ್ವತತ್ತ್ವವನ್ನು ಬಲ್ಲ ವಿಪ್ರನು ವೇಶ್ಯೆಯ ಮನೆಯಲ್ಲಿ ಬೇಕಾದರೂ ಇರಬಹುದು ; ಕಟುಕನ ಮನೆಯಲ್ಲಿ ಬೇಕಾದರೂ ವಾಸಿಸಬಹುದು ; ಆದರೆ ಶ್ರೀಮಧ್ವರ ದ್ವೇಷಿಗಳ ಮನೆಯಲ್ಲಿ ಮಾತ್ರ ಎಂದೂ ನೆಲೆಸಬಾರದು (ದೇಶ ದ್ರೋಹಿಯ ಮನೆಯಲ್ಲಿ ವಾಸಿಸುವವನು ಸಹ ದೇಶದ್ರೋಹಿ ಎನ್ನಿಸುವಂತೆ ಎಂದು ಭಾವ).

ಏತಚ್ಛಾಸ್ತ್ರಮನಾದೃತ್ಯ ತದ್ಗೃಹೇಷು ವಸೇದ್ಧಿ ಯಃ ।
ಮಧ್ವದ್ವೇಷೀ ಸದಾ ಭೂತ್ವಾ ತಮೋ ವಿಶತಿ ಸ ಧ್ರುವಮ್ ॥ ೧೨೧ ॥

ಈ ಶಾಸ್ತ್ರವನ್ನು ಉಪೇಕ್ಷಿಸಿ, ಅಂತಹವರ ಮನೆಗಳಲ್ಲಿ ವಾಸಿಸುವವನು ಸದಾ ಮಧ್ವದ್ವೇಷಿ ಎನ್ನಿಸುವನು ; ಕೊನೆಗೆ ತಮಸ್ಸನ್ನೇ ನಿಶ್ಚಿತವಾಗಿ ಹೊಂದುವನು.

ವಾಪೀಕೂಪತಟಾಕಾದಿ ಶ್ರೀಮಧ್ವದ್ವೇಷಿನಿರ್ಮಿತಮ್ ।
ಜಲಾದಿ ತತ್ತು ನ ಗ್ರಾಹ್ಯಂ ನರಕಪ್ರಾಪ್ತಿಹೇತುತಃ ॥ ೧೨೨ ॥

ಶ್ರೀಮಧ್ವದ್ವೇಷಿಗಳಿಂದ ನಿರ್ಮಿತವಾದ ಬಾವಿ ಕೆರೆ ಮೊದಲಾದ ಯಾವುದನ್ನು ಮಧ್ವಭಕ್ತನು ಸೇವಿಸಬಾರದು ; ಅವರು ಕೊಡುವ ನೀರನ್ನೂ ಸ್ವೀಕರಿಸಬಾರದು ; ಹಾಗೆ ಸ್ವೀಕರಿಸಿದಲ್ಲಿ ನರಕ ಪ್ರಾಪ್ತಿಯು ಖಚಿತ.

ಮಧ್ವಪ್ರಿಯೋ ಯದಾ ವಿಪ್ರೋ ಯದ್ಗೃಹಂ ಪ್ರವಿಶೇದ್ ವಿಭೋ ।
ತದ್ಗೃಹೇಷು ಸದಾ ಪ್ರಾಜ್ಞಾಃ ಕುರ್ಯಾತ್ ಸ್ವಸ್ತ್ಯಯನಂ ಸದಾ॥೧೨೩॥

ಮಧ್ವಪ್ರಿಯನಾದ ವಿಪ್ರನು ಯಾರ ಮನೆಗಳನ್ನು ಪ್ರವೇಶಿಸುವನೋ ಪ್ರಾಜ್ಞನಾದವನು ಆ ಮನೆಗಳಲ್ಲಿ ಮಂಗಲವು ನೆಲೆಸಿತೆಂದೇ ಭಾವಿಸಬೇಕು.

ಕನ್ಯಾಯಾ ದಾನಮಾತ್ರೇಣ ನ ತುಷ್ಯತಿ ಜನಾರ್ದನಃ ।
ತಸ್ಮಾತ್ ತುಷ್ಯತಿ ಗೋವಿಂದಃ ಶ್ರೀಮಧ್ವದ್ವೇಷಿದೂಷಣಾತ್ ॥ ೧೨೪ ॥

ಕನ್ಯಾದಾನ ಮಾತ್ರದಿಂದಲೇ ಶ್ರೀಹರಿಯು ತೃಪ್ತನಾಗಲಾರನು ; ಶ್ರೀಮಧ್ವರನ್ನು ದ್ವೇಷಿಸುವ ಜನಗಳನ್ನು ಪ್ರತಿಭಟಿಸಿದಾಗಲೇ ಅವನು ತುಷ್ಟನಾಗುವನು.

ದ್ರವ್ಯಸ್ಯ ದಾನಮಾತ್ರೇಣ ನ ತುಷ್ಯತಿ ಜನಾರ್ದನಃ ।
ತುಷ್ಟೋ ಭವತಿ ಮಧ್ವೇಶಃ ಶ್ರೀಮಧ್ವದ್ವೇಷಿದೂಷಣಾತ್ ॥ ೧೨೫ ॥

ದ್ರವ್ಯವನ್ನು ದಾನ ಮಾಡಿದ್ದರಿಂದಲೇ ಶ್ರೀಹರಿಯು ಪ್ರೀತನಾಗನು ; ಮಧ್ವೇಶನಾದ ಅವನು ಪ್ರೀತನಾಗುವುದು ಮಧ್ವದ್ವೇಷಿಗಳನ್ನು ಪ್ರತಿಭಟಿಸಿದಾಗಲೇ. (ದ್ರವ್ಯದಾನಾದಿಗಳಿಗಿಂತಲೂ ತತ್ತ್ವದೀಕ್ಷೆ ದೊಡ್ಡದು ಎಂದು ಭಾವ.)

ಪುರಾಣಪಠನಾ(ಶ್ರವಣಾ)ದೇವ ನ ತುಷ್ಯತಿ ಜನಾರ್ದನಃ ।
ತಸ್ಮಾತ್ ತುಷ್ಯತಿ ಶ್ರೀಕೃಷ್ಣಃ ಶ್ರೀಮಧ್ವದ್ವೇಷಿದೂಷಣಾತ್ ॥ ೧೨೬ ॥

ಪುರಾಣಪಠನ ಮಾತ್ರದಿಂದ ಶ್ರೀಹರಿಯು ಪ್ರಸನ್ನನಾಗನು ; ಅವನು ಪ್ರಸನ್ನನಾಗುವುದು ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸಿದಾಗಲೇ.

ಕಿಮತ್ರ ಬಹುನೋಕ್ತೇನ ಶ್ರೀಮಧ್ವದ್ವೇಷಿದೂಷಣಾತ್ ।
ವಿನಾ ನ ಕರ್ಮ ಫಲದಂ ಸತ್ಯಂ ಸತ್ಯಂ ನ ಸಂಶಯಃ ॥ ೧೨೭ ॥

ಹೆಚ್ಚೇನು ? ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸದವನ ಯಾವ ಕರ್ಮವೂ ಫಲಪ್ರದವಾಗುವುದೇ ಇಲ್ಲ ; ಇದು ಸತ್ಯ ಸತ್ಯ ; ಸಂಶಯವಿಲ್ಲ.

ಮಧ್ವಶಾಸ್ತ್ರೋರ್ಧ್ವಪುಂಡ್ರಾದಿರಹಿತೋ ಬ್ರಾಹ್ಮಣಾಧಮಃ ।
ಮಧ್ವದ್ವೇಷೀತಿ ವಿಜ್ಞೇಯಃ ಚಂಡಾಲ ಇತಿ ಚೋಚ್ಯತೇ ॥ ೧೨೮ ॥

ಮಧ್ವಶಾಸ್ತ್ರ, ಊರ್ಧ್ವಪುಂಡ್ರಗಳನ್ನು ತೊರೆದ ಬ್ರಾಹ್ಮಣಾಧಮನನ್ನು ಮಧ್ವದ್ವೇಷಿ ಎಂದೇ ತಿಳಿಯಬೇಕು, ಅವನು ಚಂಡಾಲ ಎನ್ನಿಸುವನು.

ಜಪ್ತಂ ದತ್ತಂ ಹುತಂ ಸ್ನಾತಂ ತಥಾ ಪೂಜಾ ಕೃತಾ ಹರೇಃ ।
ವ್ಯರ್ಥಂ ಭವತಿ ತತ್ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥ ೧೨೯ ॥

ಜಪ, ದಾನ, ಸ್ನಾನ, ಶ್ರೀಹರಿಗೆ ಸಲ್ಲಿಸಿದ ಪೂಜೆ ಮೊದಲಾದ ಸಕಲವೂ ಶ್ರೀಮಧ್ವದ್ವೇಷಿಗಳಿಗೆ ವಂದಿಸಿದಾಗ ವ್ಯರ್ಥವೆನ್ನಿಸುವವು.

ಪ್ರಾತಃ ಸ್ನಾನಂ ತಥಾ ಯಜ್ಞಂ ವಿಪ್ರಾದೇರ್ಭೋಜನಂ ತಥಾ ।
ವ್ಯರ್ಥಂ ಭವತಿ ತತ್ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥ ೧೩೦ ॥

ನಿತ್ಯದ ಪ್ರಾತಃ ಸ್ನಾನ, ಯಜ್ಞ, ಬ್ರಾಹ್ಮಣಾದಿಗಳಿಗೆ ಮಾಡಿಸಿದ ಭೋಜನ ಈ ಎಲ್ಲವೂ ಶ್ರೀಮಧ್ವದ್ವೇಷಿಗಳಿಗೆ ನಮಸ್ಕರಿಸಿದಾಗ ವ್ಯರ್ಥವೆನ್ನಿಸುವವು.

ಪ್ರಾತಃ ಸ್ನಾನೇನ ಕಿಂ ತಸ್ಯ ಪಿನಾಕಿನ್ಯಾ ಚ ತಸ್ಯ ಕಿಮ್ ।
ಜಿಹ್ವಾಗ್ರೇ ವರ್ತತೇ ಯಸ್ಯ ಶ್ರೀಮಧ್ವದ್ವೇಷಿದೂಷಣಮ್ ॥ ೧೩೧ ॥

ಶ್ರೀಮಧ್ವರನ್ನು ದ್ವೇಷಿಸುವ ಜನಗಳನ್ನು ಮಾತಿನಿಂದ ಪ್ರತಿಭಟಿಸುವವನಿಗೂ ಪ್ರಾತಃ ಸ್ನಾನವೇತಕ್ಕೆ? ಪಿನಾಕಿನೀ ಸ್ನಾನವಾದರೂ ಏತಕ್ಕೆ ?(ಮಧ್ವದೂಷಕರನ್ನು ಪ್ರತಿಭಟಿಸುವುದು ತೀರ್ಥಸ್ನಾನಕ್ಕಿಂತಲೂ ಮಿಗಿಲು ಎಂದು ಭಾವ).

ವೇದಸ್ಯ ಪಠನಂ ಸೇವಾ ದೇವದೇವಸ್ಯ ಚಕ್ರಿಣಃ ।
ವ್ಯರ್ಥಂ ಭವತಿ ಮೂಢಸ್ಯ ಶ್ರೀಮಧ್ವದ್ವೇಷಿವಂದನಾತ್ ॥ ೧೩೨ ॥

ವೇದಪಾಠ, ದೇವಸೇವನಾದ ಶ್ರೀಹರಿಯ ಸೇವೆಗಳು ಸಹ ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸದವನ ಪಾಲಿಗೆ ವ್ಯರ್ಥವೇ ಸರಿ.

ಭೂದಾನಂ ಸ್ವರ್ಣದಾನಂ ಚ ಗವಾಂ ದಾನಂ ತಥೈವ ಚ ।
ವ್ಯರ್ಥಂ ಭವತಿ ತತ್ ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥ ೧೩೩ ॥

ಶ್ರೀಮಧ್ವರ ದ್ವೇಷಿಗಳನ್ನು ಪ್ರತಿಭಟಿಸದವನು ಮಾಡುವ ಭೂದಾನ, ಸ್ವರ್ಣದಾನ, ಗೋದಾನ ಮೊದಲಾದ ಸಕಲ ದಾನಗಳೂ ವ್ಯರ್ಥವೆನ್ನಿಸುವವು.

ಛತ್ರದಾನಂ ಶಿಲಾದಾನಂ ವಿದ್ಯಾದಾನಂ ತಥೈವ ಚ ।
ವ್ಯರ್ಥಂ ಭವತಿ ತತ್ ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥ ೧೩೪ ॥

ಛತ್ರದಾನ, ಶಿಲಾದಾನ, ವಿದ್ಯಾದಾನ ಮೊದಲಾದ ಸರ್ವವೂ ಶ್ರೀಮಧ್ವದ್ವೇಷಿಗಳಿಗೆ ವಂದಿಸಿದಾಗ ವ್ಯರ್ಥವಾಗುವವು.

ಕಿಮತ್ರ ಬಹುನೋಕ್ತೇನ ಯದ್ಯತ್ ಕರ್ಮ ಜನೈಃ ಕೃತಮ್ ।
ವ್ಯರ್ಥಂ ಭವತಿ ತತ್ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥ ೧೩೫ ॥

ಹೆಚ್ಚೇನು ? ಶ್ರೀ ಮಧ್ವದ್ವೇಷಿಗಳಿಗೆ ವಂದಿಸುವವನು ಮಾಡುವ ಕರ್ಮಗಳೆಲ್ಲವೂ ವ್ಯರ್ಥವೆಂದೇ ಕರೆಸುವುವು. (ಅಯೋಗ್ಯರಿಗೆ ವಂದಿಸುವುದು ಮಹಾಪಾಪ ಎಂದು ಭಾವ).

[1]ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ।
ನ ಕರ್ತವ್ಯಂ ನ ಕರ್ತವ್ಯಂ ಶ್ರೀಮಧ್ವದ್ವೇಷಿವಂದನಮ್ ॥ ೧೩೬ ॥

ಸತ್ಯ, ಸತ್ಯ, ಸತ್ಯ ಎಂಬುದಾಗಿ ತೋಳೆತ್ತಿ ಹೇಳುವೆನು ; ಶ್ರೀ ಮಧ್ವದ್ವೇಷಿಗಳಿಗೆ ವಂದಿಸಕೂಡದು ; ವಂದಿಸಕೂಡದು.

ಏತತ್ ಸರ್ವಮನಾದೃತ್ಯ ಶ್ರೀಮಧ್ವದ್ವೇಷಿವಂದನಂ ।
ಕರೋತಿ ಮರ್ತ್ಯೋ ಮೂಢಾತ್ಮಾ ತಮೋ ವಿಶತಿ ಸ ಧ್ರುವಂ ॥ ೧೩೭ ॥

ಇದೆಲ್ಲವನ್ನು ಕಡೆಗಣಿಸಿ ಶ್ರೀ ಮಧ್ವದ್ವೇಷಿಗಳಿಗೆ ವಂದಿಸುವ ಮೂಢಾತ್ಮನು ನಿಶ್ಚಿತವಾಗಿ ತಮಸ್ಸನ್ನೇ ಹೊಂದುವನು.

[2]ನ ಭೋಕ್ತವ್ಯಂ ನ ಭೋಕ್ತವ್ಯಂ ಶ್ರೀಮಧ್ವದ್ವೇಷಿಸದ್ಮನಿ ।
ಸಂಪ್ರಾಪ್ತೇ ಮರಣೇ ವಾಽಪಿ ಹ್ಯನ್ಯಥಾ ನರಕಂ ವ್ರಜೇತ್ ॥ ೧೩೮ ॥

ಶ್ರೀಮಧ್ವದ್ವೇಷಿಗಳ ಮಂದಿರದಲ್ಲಿ ಪ್ರಾಣ ಹೋದರೂ ಸರಿ, ಭೋಜನ ಮಾಡಕೂಡದು ; ಹಾಗೆ ಮಾಡಿದಲ್ಲಿ ನರಕವನ್ನೇ ಹೊಂದುವನು.

ಅಪಕ್ವಂ ವಾ ಸುಪಕ್ವಂ ವಾ ತದನ್ನಂ ನೈವ ಪೂಜಯೇತ್ ।
ಮಧ್ವಃ ಕುಪ್ಯತಿ ಸರ್ವಜ್ಞಃ ತೇನ ಯಾತಿ ತಮೋ ಧ್ರುವಮ್ ॥೧೩೯॥

ಮಧ್ವದ್ವೇಷಿಗಳಿಂದ ಬೇಯದ ಅಥವಾ ಬೆಂದ ಎಂತಹುದೇ ಆಹಾರವನ್ನೂ ಸ್ವೀಕರಿಸ ಕೂಡದು , ಹಾಗೆ ಸ್ವೀಕರಿಸಿದಲ್ಲಿ ಸರ್ವಜ್ಞರಾದ ಅವರು ಕೋಪಿಸಿ ಕೊಳ್ಳುವರು ; ಅದರಿಂದ ಖಚಿತವಾಗಿ ತಮಸ್ಸೇ ಆಗುವುದು.

ಜಪ್ತಂ ದತ್ತಂ ಹುತಂ ಸ್ನಾತಂ ತಥಾ ಅರ್ಚಾದಿಪೂರ್ವಕಮ್ ।
ವ್ಯರ್ಥಂ ಭವತಿ ತತ್ ಸರ್ವಂ ಶ್ರೀಮಧ್ವದ್ವೇಷಿಭಾಷಣಾತ್ ॥ ೧೪೦ ॥

---

1 ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ॥ —ಹರಿವಂಶ

2 ನ ಭೋಕ್ತವ್ಯಂ ನ ಭೋಕ್ತವ್ಯಂ ಸಂಪ್ರಾಪ್ತೇ ಹರಿವಾಸರೇ ।
ಸಂಪ್ರಾಪ್ತೇ ಮರಣೇ ವಾಽಪಿ ಹ್ಯನ್ಯಥಾಽನರಕಂ ವ್ರಜೇತ್ ॥ —(ಕೃ ಮ.)

ಜಪ, ದಾನ, ಹೋಮ, ಸ್ನಾನ ಮತ್ತು ಅರ್ಚನ ಮೊದಲಾದ ಸಕಲವೂ ಶ್ರೀ ಮಧ್ವದ್ವೇಷಿಗಳೊಂದಿಗೆ ಮಾತನಾಡಿದರೆ ವ್ಯರ್ಥವೆನ್ನಿಸುತ್ತದೆ.

[1]ಜ್ಞಾನಂ ಹೋಮಸ್ತಥಾ ಸಂಧ್ಯಾ ಸ್ವಾಧ್ಯಾಯಾದಿಸಮಸ್ತಕಮ್ ।
ವ್ಯರ್ಥಂ ಭವತಿ ವಿಪ್ರೇಂದ್ರ ಶ್ರೀಮಧ್ವದ್ವೇಷಿಭೋಜನಾತ್ ॥ ೧೪೦ ॥

ಜ್ಞಾನ, ಹೋಮ, ಸಂಧ್ಯಾವಂದನ, ಸ್ವಾಧ್ಯಾಯ (ಬ್ರಹ್ಮಯಜ್ಞ)ಮೊದಲಾದ ಸಮಸ್ತವೂ ಎಲೈ ವಿಪ್ರೋತ್ತಮನೇ! ಶ್ರೀಮಧ್ವದ್ವೇಷಿಗಳಿಗೆ ಭೋಜನವಿತ್ತರೆ, (ಅಥವಾ ಶ್ರೀ ಮಧ್ವದ್ವೇಷಿಗಳಿಂದ ಭೋಜನ ಸ್ವೀಕರಿಸಿದರೆ) ವ್ಯರ್ಥವಾಗುತ್ತವೆ.

ಅನ್ನಸ್ಯ ಕ್ಷುಧಿತಂ ಪಾತ್ರಮಿತಿ ವಾಕ್ಯಬಲಾದ್ಧಿ ಯಃ ।
ಅನ್ನಂ ದದಾತಿ ಶ್ರೀಮಧ್ವದ್ವೇಷಿಣೇ ಜಾಯತೇ ಕ್ರಿಮಿಃ ॥ ೧೪೧ ॥

"ಹಸಿದವನಿಗೆ ಅನ್ನವೀಯಬೇಕು" ಎಂಬ ವಾಕ್ಯವನ್ನು ಆಧರಿಸಿ (ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ) ಶ್ರೀಮಧ್ವದ್ವೇಷಿಗೆ ಅನ್ನವೀಯುವವನು ಕ್ರಿಮಿಯಾಗಿ ಹುಟ್ಟುವನು.

[2]ಯಥಾ ಯಥಾ ಶ್ರೀಮಧ್ವದ್ವೇಷಿಕ್ರೋಧಃ ಪ್ರಜಾಯತೇ ।
ತಥಾ ತಥಾ ವೈ ಶ್ರೀಮಧ್ವಸ್ತುಷ್ಟೋ ಭವತಿ ಭೂಮಿಪ ॥ ೧೪೨ ॥

ಎಲೈ ಭೂಪಾಲ! ಮಧ್ವದ್ವೇಷಿಗಳ ಮೇಲೆ ಹೆಚ್ಚು ಹೆಚ್ಚು ಕ್ರೋಧಗೊಳ್ಳುತ್ತ ಹೋದಂತೆಲ್ಲ ಶ್ರೀ ಮಧ್ವರು ಅವನ ಮೇಲೆ ಪ್ರಸನ್ನರಾಗುತ್ತ ಹೋಗುವರು.

ಯಥಾ ಯಥಾ ವೈ ಶ್ರೀಮಧ್ವದ್ವೇಷಿರಾಗಃ ಪ್ರಜಾಯತೇ ।
ತಥಾ ತಥಾ ವೈ ಲಕ್ಷ್ಮೀಶಃ ಕುಪ್ಯತ್ಯತ್ರ ನ ಸಂಶಯಃ ॥ ೧೪೩ ॥

ಶ್ರೀಮಧ್ವದ್ವೇಷಿಗಳ ಮೇಲೆ ಒಲವು ಬೆಳೆಯುತ್ತ ಹೋದಂತೆ, ಶ್ರೀಹರಿಯ ಕೋಪ ಹೆಚ್ಚುತ್ತ ಹೋಗುವುದು.

ಚಂಡಾಲಂ ವಾ ಸ್ಪೃಶೇತ್ ಕ್ವಾಪಿ ಶ್ಮಶಾನಂ ವಾ ಸ್ಪೃಶೇತ್ ಕ್ವಚಿತ್ ।
ನ ಸ್ಪೃಶೇದಧಮಂ ದುಷ್ಟಂ ಚಂಡಾಲಂ ಮಧ್ವದೂಷಕಮ್ ॥ ೧೪೪ ॥

ಚಂಡಾಲನನ್ನು ಬೇಕಿದ್ದರೂ ಮುಟ್ಟಬಹುದು; ಸ್ಮಶಾನವನ್ನು ಬೇಕಾದರೂ ಮುಟ್ಟಬಹುದು; ಆದರೆ ಶ್ರೀಮಧ್ವದೂಷಕನಾದ ದುಷ್ಟಚಂಡಾಲನನ್ನು ಮಾತ್ರ ಸ್ಪರ್ಶಿಸಲೇ ಕೂಡದು.

---

1 ಜಪ್ತಂ ದತ್ತಂ ಹುತಂ ತಪ್ತಂ ಸ್ವಾಧ್ಯಾಯಃ ಪಿತೃತರ್ಪಣಮ್ ।
ವ್ಯರ್ಥಂ ಭವತಿ ತತ್ಸರ್ವಮಾಧ್ವಪಥಂ ವಿನಾ ಕೃತಮ್ ॥ —ಸ್ಕಾ.ಪು.

2 ಯಥಾ ಯಥಾ ವಿಷ್ಣುಪರಸ್ಮಿನ್ ರಾಗಃ ತಥಾ ತಥಾ ಪ್ರಸನ್ನಃ ಪರಃ ।
—ಮ.ಭಾ.ತಾ.ನಿ.

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ । —ಸ್ಕಾ.ಪು.

ಶ್ವಾನಂ ವಾ ಗರ್ದಭಂ ವಾಽಪಿ ಸ್ಪೃಶೇದ್ವೈ ವಿಪ್ರಸತ್ತಮಃ ।
ನ ಸ್ಪೃಶೇದಧಮಂ ದುಷ್ಟಂ ಚಂಡಾಲಂ ಮಧ್ವದೂಷಕಮ್ ॥ ೧೪೬ ॥

ವಿಪ್ರೋತ್ತಮನು ನಾಯಿ ಕತ್ತೆಗಳನ್ನಾದರೂ ಮುಟ್ಟಬಹುದು ; ಆದರೆ ಮಧ್ವದೂಷಕನಾದ ದುಷ್ಟ ಚಂಡಾಲನನ್ನು ಮಾತ್ರ ಸ್ಪರ್ಶಿಸಲೇ ಕೂಡದು.

ಕುಕ್ಕುಟಂ ವಾ ಸ್ಪೃಶೇತ್ ಶ್ವಾಪಿ ವರಾಹಂ ವಾ ಸ್ಪೃಶೇತ್ ಕ್ವಚಿತ್ ।
ನ ಸ್ಪೃಶೇದಧಮಂ ದುಷ್ಟಂ ಪತಿತಂ ಮಧ್ವದೂಷಕಮ್ ॥ ೧೪೭ ॥

ಎಂದಾದರೊಮ್ಮೆ (ಅನಿವಾರ್ಯವಾಗಿ) ಕೋಳಿಯನ್ನಾಗಲಿ, ಹಂದಿಯನ್ನಾಗಲಿ ಮುಟ್ಟಿದರೂ ತಪ್ಪಿಲ್ಲ ; ಮಧ್ವದೂಷಕನಾದ ದುಷ್ಟನನ್ನು, ಪತಿತನನ್ನು ಮಾತ್ರ ಸ್ಪರ್ಶಿಸಲೇ ಕೂಡದು.

ಮಧ್ವಸ್ಯ ದ್ವೇಷಿಣಂ ದುಷ್ಟಂ ನ ಸ್ಪೃಶೇನ್ನ ಸ್ಮರೇದಪಿ ।
ಜ್ಞಾನತೋಽಜ್ಞಾನತೋ ವಾಽಪಿ ನ ದದ್ಯಾದನ್ನಸಂಚಯಮ್ ॥ ೧೪೮ ॥

ಮಧ್ವದ್ವೇಷಿಯಾದ ದುಷ್ಟನನ್ನು ಸ್ಪರ್ಶಿಸಲೂ ಕೂಡದು ; ಸ್ಮರಿಸಲೂ ಕೂಡದು ; ತಿಳಿದೋ ತಿಳಿಯದಯೋ ಅಂಥವನಿಗೆ ಅನ್ನವನ್ನು ನೀಡಲೂ ಕೂಡದು.

ಭಕ್ತ್ಯಾ ವಾ ಯದಿ ವಾಽಭಕ್ತ್ಯಾ ಶ್ರೀಮಧ್ವದ್ವೇಷಿಣಂ ನರಃ ।
ನಮ ಇತ್ಯೇವ ಯೋ ಬ್ರೂಯಾತ್ ತಮೋಽಂಧಂ ವಿಶತಿ ಧ್ರುವಮ್ ॥ ೧೪೯ ॥

ಭಕ್ತಿಯಿಂದಾಗಲಿ, ಭಕ್ತಿಯಿಲ್ಲದಲೆ ಆಗಲಿ, ಶ್ರೀಮಧ್ವದ್ವೇಷಿಗೆ 'ನಮಸ್ಕಾರ' ಎಂದು ನುಡಿಯುವ ನರನು ಅಂಧಂತಮಸ್ಸನ್ನು ಖಚಿತವಾಗಿ ಹೊಂದುವನು.

ಶೂದ್ರಾಲಯೇ ವಸೇದ್ಧೀಮಾನ್ ಚಂಡಾಲಸ್ಯ ಗೃಹೇಷು ವಾ ।
ನ ವಸೇತ್ ಶಾಸ್ತ್ರತತ್ತ್ವಜ್ಞಃ ಶ್ರೀಮಧ್ವದ್ವೇಷಿಸದ್ಮನಿ ॥ ೧೫೦ ॥

ಬುದ್ಧಿವಂತನು ಶೂದ್ರಮಂದಿರದಲ್ಲಾಗಲೀ, ಚಂಡಾಲರ ಗೃಹಗಳಲ್ಲಾಗಲೀ ವಾಸಿಸಬಹುದು ; ಆದರೆ ಶಾಸ್ತ್ರತತ್ತ್ವವನ್ನು ಬಲ್ಲವನು ಶ್ರೀಮಧ್ವದ್ವೇಷಿಗಳ ಮನೆಯಲ್ಲಿ ಎಂದೂ ವಾಸಿಸಕೂಡದು.

ಶ್ಮಶಾನೇ ವಾ ವಸೇದ್ವಿಪ್ರಃ ಅಂತ್ಯಜಾನಾಂ ಗೃಹೇಷು ವಾ ।
ನ ವಸೇಚ್ಛಾಸ್ತ್ರತತ್ತ್ವಜ್ಞಃ ಶ್ರೀಮಧ್ವದ್ವೇಷಿಸದ್ಮನಿ ॥ ೧೫೧ ॥

ವಿಪ್ರನು ಸ್ಮಶಾನದಲ್ಲಾದರೂ ಅಂತ್ಯಜರ ಮನೆಯಲ್ಲಾದರೂ ಬೇಕಿದ್ದರೆ ವಾಸಿಸಬಹುದು ; ಆದರೆ ಶಾಸ್ತ್ರತತ್ತ್ವವನ್ನು ಬಲ್ಲವನು ಶ್ರೀಮಧ್ವದ್ವೇಷಿಗಳ ಮನೆಯಲ್ಲಿ ಮಾತ್ರ ವಾಸಿಸಲೇ ಕೂಡದು.

ಮ್ಲೇಚ್ಛದೇಶೇಽಶುಚೌ ವಾಽಪಿ ವಸೇದ್ವೈ ವಿಪ್ರಸತ್ತಮಃ ।
ನ ವಸೇದ್ವಿಷ್ಣುತತ್ತ್ವಜ್ಞಃ ಶ್ರೀಮಧ್ವದ್ವೇಷಿಸದ್ಮನಿ ॥ ೧೫೨ ॥

ವಿಪ್ರೋತ್ತಮನು ಅನಿವಾರ್ಯವಾದಲ್ಲಿ ಮ್ಲೇಂಚ್ಛದೇಶದಲ್ಲಾಗಲಿ,ಅಶುಚಿಸ್ಥಳದಲ್ಲಾಗಲೀ ಬೇಕಾದರೂ ವಾಸಿಸಬಹುದು. ಆದರೆ ವಿಷ್ಣುತತ್ತ್ವವನ್ನು ತಿಳಿದವನು ಶ್ರೀಮಧ್ವದ್ವೇಷಿಯ ಮನೆಯಲ್ಲಿ ವಾಸಿಸಕೂಡದು.

ದೇವಾಲಯೇ ವಸೇದ್ವಿಪ್ರೋಽರಣ್ಯೇ ವಾ ವಸೇತ್ ಸುಧೀಃ ।
ನ ವಸೇತ್ ಮುಕ್ತಿಕಾಮಶ್ಚೇತ್ ಶ್ರೀಮಧ್ವದ್ವೇಷಿಸದ್ಮನಿ ॥ ೧೫೩ ॥

ವಿವೇಕಿಯಾದ ವಿಪ್ರನು ದೇವಾಲಯದಲ್ಲಾಗಲಿ, ಅರಣ್ಯದಲ್ಲಾಗಲಿ, ವಾಸಿಸಬಹುದು ; ಮೋಕ್ಷ ಬಯಸುವವನು ಶ್ರೀಮಧ್ವದ್ವೇಷಿಯ ಮನೆಯಲ್ಲಿ ಮಾತ್ರ ವಾಸಿಸಕೂಡದು.

ಚಂಡಾಲಪತಿತಾದೀನಾಮನ್ನಂ ದದ್ಯಾತ್ ಕದಾಚನ ।
ನ ದದ್ಯಾತ್ ವಿಷ್ಣುಭಕ್ತಶ್ಚೇತ್ ಶ್ರೀಮಧ್ವದ್ವೇಷಿಣೋ ನರಃ ॥ ೧೫೪ ॥

ವಿಷ್ಣುಭಕ್ತನು ಚಂಡಾಲ, ಪತಿತ ಮೊದಲಾದವರಿಗೂ ಅನ್ನನೀಡಬಹುದು ; ಆದರೆ ಶ್ರೀಮಧ್ವದ್ವೇಷಿಗೆ ಮಾತ್ರ ಎಂದೂ ಅನ್ನ ನೀಡಕೂಡದು.

ಮಧ್ವದ್ವೇಷೀ ಯದಾ ವಿಪ್ರೋ ಯದ್ಗೃಹಾನ್ ಪ್ರವಿಶೇದ್ಯದಾ ।
ತದ್ಗೃಹೇಷು ಮಹಾಪ್ರಾಜ್ಞಃ ಕುರ್ಯಾತ್ ಸ್ವಸ್ತ್ಯಯನಂ ಸದಾ॥೧೫೫॥

ಮಧ್ವದ್ವೇಷಿಯು ಪ್ರವೇಶಿಸಿದ ಗೃಹವನ್ನು ಪ್ರಾಜ್ಞನಾದನನ್ನು ಸ್ವಸ್ತಿವಾಚನ ಮಾಡಿ ಶುದ್ಧಮಾಡಿಸಬೇಕು.

ಸರ್ವದೇವಮಯೋ ವಿಪ್ರಃ ಸರ್ವೇಷಾಮೇವ ಜೀವನಮ್ ।
ಸರ್ವೇಷಾಂ ಪ್ರಾಣಭೂತಶ್ಚ ನಾರಾಯಣವಶೇ ಸ್ಥಿತಃ ॥ ೧೫೬ ॥

ಬ್ರಾಹ್ಮಣನು ಸರ್ವದೇವತೆಗಳ ಸನ್ನಿಧಿಯನ್ನು ಹೊಂದಿರುವವನನು; ಸರ್ವರಿಗೂ ಬದುಕಿಗೆ ನೆರವಾಗುವವನು ; ಎಲ್ಲರಿಗೂ ಪ್ರಾಣದಂತಿರುವವನು ; ಸದಾ ನಾರಾಯಣನ ವಶದಲ್ಲಿರುವನೆಂದು ತಿಳಿದವನೂ ಆಗಿರುವನು.

ಮಧ್ವಭಕ್ತೋ ಯದಾ ವಿಪ್ರೋ ಮಾಯಿಭಿಸ್ತು ಪರಾಜಿತಃ ।
ತದಾ ಪ್ರಾಜ್ಞಃ ಕುಲೀನಶ್ಚೇದ್ರಾಜೋದಾಸೀನತಾಂ ವ್ರಜೇತ್ ॥ ೧೫೭ ॥

ಮಧ್ವಭಕ್ತನಾದ ವಿಪ್ರನು ಮಾಯಿಗಳಿಂದ ಪರಾಜಿತನಾದರೆ, ಆಗ ಪ್ರಾಜ್ಞನೂ, ಸತ್ಕುಲಪ್ರಸೂತನೂ ಆದ ರಾಜನು ಉದಾಸೀನನಾಗಿರಬೇಕು.

ಯದಾ ಮಾಯೀ ದುರ್ಮತಜ್ಞೋ ಮಧ್ವಭಕ್ತ್ಯಾಃ ಪರಾಜಿತಃ ।
ರಾಜಾ ಕಾಕಾಂಕಿತಂ ಕೃತ್ವಾ ಗ್ರಾಮಾದ್ಬಹಿರ್ವಿನಿಃಸೃಜೇತ್ ॥ ೧೫೮ ॥

ದುರ್ಮತವನ್ನು ಬಲ್ಲ ಮಾಯಿಯು ಮಧ್ವಭಕ್ತರಿಂದ ಪರಾಜಿತನಾದಲ್ಲಿ, ಅಂತಹವನನ್ನು ರಾಜನು ತಲೆ ಬೋಳಿಸಿ ಊರಿನಿಂದ ಗಡೀ ಪಾರು ಮಾಡಬೇಕು.

ಚಂಡಾಲಪತಿತೈಃ ಸಾಕಂ ನ ನಿಷಿದ್ಧಂ ತು ಭೋಜನಮ್ ।
ಶ್ರೀಮಧ್ವದ್ವೇಷಿಭಿಃ ಸಾಕಂ ನಿಷಿದ್ಧಂ ಭೋಜನಂ ಸ್ಮೃತಮ್ ॥ ೧೫೯ ॥

ಚಂಡಾಲ ಪತಿತರೊಂದಿಗೆ ಭೋಜನ ಅಷ್ಟು ನಿಷಿದ್ಧವಲ್ಲ ! ಆದರೆ ಮಧ್ವ ದ್ವೇಷಿಗಳೊಂದಿಗೆ ಕುಳಿತು ತಿನ್ನುವುದು ಮಾತ್ರ ತುಂಬಾ ನಿಷಿದ್ಧವೇ ಸರಿ.

ನ ಗಂತವ್ಯಂ ಮಾಯಿನಾಂ ತು ಗೃಹಮಧ್ಯೇ ಕದಾಚನ ।
ವಿಶೇದ್ಯದಿ ಸ ಮೂಢಾತ್ಮಾ ಗಂಗಾಸ್ನಾನೇನ ಶುದ್ಧ್ಯತಿ ॥ ೧೬೦ ॥

ಮಾಯಿಗಳ ಮನೆಯೊಳಕ್ಕೆ ಎಂದೂ ಪ್ರವೇಶಿಸಕೂಡದು ; ಹಾಗೆ ಪ್ರವೇಶಿಸಿ ದಲ್ಲಿ ಅಂತಹ ಮೂರ್ಖನು ಶುದ್ಧನಾಗಲು ಗಂಗಾಸ್ನಾನವನ್ನೇ ಮಾಡಬೇಕಾಗುತ್ತದೆ.

ಯೇ ಮಧ್ವಶಾಸ್ತ್ರನಿರತಾಃ ಶ್ರೀಮಧ್ವದ್ವೇಷಿನಿಂದಕಾಃ ।
ಮಧ್ವಶಾಸ್ತ್ರಪ್ರವಕ್ತಾರೋ ನ ತೇ ಯಾಂತಿ ಯಮಾಲಯಮ್॥ ೧೬೧॥

ಮಧ್ವಶಾಸ್ತ್ರದಲ್ಲಿ ಆಸಕ್ತರಾದವರೂ, ಶ್ರೀಮಧ್ವದ್ವೇಷಿಗಳನ್ನು ಪ್ರತಿಭಟಿಸುವ ವರೂ ಮತ್ತು ಮಧ್ವಶಾಸ್ತ್ರವನ್ನು ಪ್ರವಚನ ಮಾಡುವವರೂ ಆದವರು ಎಂದೂ ಯಮಲೋಕಕ್ಕೆ ತೆರಳುವುದೇ ಇಲ್ಲ.

ಮುಕ್ತಾವಿಹ ಚ ಸಂಸಾರೇ ಜೀವಾನಾಂ ಚ ಪರಸ್ಪರಮ್।
ಜಾನಂತಿ ಭೇದ ಇತ್ಯೇವ ನ ತೇ ಯಾಂತಿ ಯಮಾಲಯಮ್ ॥ ೧೬೨ ॥

ಮುಕ್ತಿಯಲ್ಲೂ, ಈಗಿನ ಸಂಸಾರದಲ್ಲೂ ಜೀವರಿಗೆ ಪರಸ್ಪರ ಭೇದವಿರುವುದು ಎಂದು ತಿಳಿಯುವವರು ಯಮಲೋಕಕ್ಕೆ ತೆರಳುವುದಿಲ್ಲ (ಪಂಚಭೇದ ಜ್ಞಾನದಿಂದ ನರಕ ಪರಿಹಾರ ಎಂದು ಭಾವ).

ಯೇ ಮಧ್ವಸ್ಮರಣೇ ಸಕ್ತಾಃ ಸದಾ ತತ್ಪೂಜನೇ ರತಾಃ ।
ಮಧ್ವದಾಸಸ್ಯ ದಾಸಾ ಯೇ ನ ತೇ ಯಾಂತಿ ಯಮಾಲಯಮ್॥೧೬೩॥

ಶ್ರೀಮಧ್ವ ಸ್ಮರಣೆಯಲ್ಲಿ ನಿರತರಾದವರು, ಅವರ ಪೂಜನದಲ್ಲಿ ಆಸಕ್ತರಾದವರು, ಮಧ್ವದಾಸರಿಗೆ ದಾಸರಾದವರು ಎಂದೂ ಯಮಲೋಕಕ್ಕೆ ಹೋಗಲಾರರು.

ಹತ್ವಾ ತ್ವವೈಷ್ಣವಂ ವಿಪ್ರಂ ಪ್ರಾಯಶ್ಚಿತ್ತಂ ನ ಕಾರಯೇತ್ ।
ತೇನ ತುಷ್ಯತಿ ಮಧ್ವೇಶಃ ಪ್ರಾಯಶ್ಚಿತ್ತಂ ತು ನಿಷ್ಫಲಮ್ ॥ ೧೬೪ ॥

ದೈವದ್ರೋಹಿಯಾದ ವಿಪ್ರನನ್ನು ಕೊಂದಲ್ಲಿ ಪ್ರಾಯಶ್ಚಿತ್ತ ಮಾಡಿಕೊಳ್ಳ ಬೇಕಾಗಿಲ್ಲ; ಆದರಿಂದ ಮಧ್ವೇಶನಾದ ಹರಿಯು ಪ್ರಸನ್ನನಾಗುವನು ಪ್ರಾಯಶ್ಚಿತ್ತವು ಮಾತ್ರ ನಿರರ್ಥಕ.

ಅವೈಷ್ಣವಸ್ಯ ಹಸ್ತಾತ್ ತು ದಿವ್ಯದೇಶಾಗತಂ ಪ್ರಭೋ ।
ತೀರ್ಥನಿರ್ಮಾಲ್ಯಪೂರ್ವಂ ತು ವರ್ಜಯೇಚ್ಚ ವಿಚಕ್ಷಣಃ ॥ ೧೬೫ ॥

ಅವೈಷ್ಣವನು ತಂದುಕೊಡುವ ತೀರ್ಥ, ನಿರ್ಮಾಲ್ಯ, ಪ್ರಸಾದ ಮೊದಲಾದವುಗಳು, ಅವು ಪುಣ್ಯಕ್ಷೇತ್ರಕ್ಕೆ ಸೇರಿದ್ದರೂ ಸಹ ವಿವೇಕಿಯು ತೊರೆಯಬೇಕು.

[1]ಅವೈಷ್ಣವಸ್ಯ ವಿಪ್ರಸ್ಯ ಸೇವಯಾ ಜೀವನಂ ಯದಾ ।
ಚಂಡಾಲಪತಿತಾದೀನಾಂ ಸೇವಯಾ ಜೀವನಂ ವರಮ್ ॥ ೧೬೬ ॥

ಭಗವದ್ದ್ವೇಷಿಯಾದ ವಿಪ್ರನನ್ನು ಸೇವಿಸಿ ಬದುಕುವುದಕ್ಕಿಂತ, ಚಂಡಾಲ ಪತಿತ ಮೊದಲಾದವರನ್ನು ಸೇವಿಸಿ ಬದುಕುವುದು ಮೇಲು.

ಅರ್ಥವಾದಮಿಮಂ ಸರ್ವಂ ಪುರಾಣಮಿತಿ ಯೋ ವದೇತ್ ।
ನರಕೇ ಪಚ್ಯತೇ ಘೋರೇ ಯಾವದಿಂದ್ರಾಶ್ಚತುರ್ದಶ ॥ ೧೬೭ ॥

ಈ ಪುರಾಣ ವಾಕ್ಯಗಳನ್ನು ಅರ್ಥವಾದವೆಂದು ಕಡೆಗಣಿಸುವವನು ಹದಿನಾಲ್ಕು ಇಂದ್ರರ ಆಳ್ವಿಕೆಯ ಕಾಲದಷ್ಟು ದೀರ್ಘಕಾಲ ಘೋರ ನರಕದಲ್ಲಿ ಬೇಯುವನು.

॥ ಇತಿ ಶ್ರೀ ಮನ್ನಾರಾಯಣಪಂಡಿತಾಚಾರ್ಯ ವಿರಚಿತಃ [2]ಮಧ್ವಾಮೃತಮಹಾರ್ಣವಃ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

ಸಮರ್ಪಿತಂ ಮಯಾ ಭವೇತ್ ಸುಮಧ್ವಸುತ್ತವಾಣಿನಾ ।
ರಮಾರಮೇಶಪಾದಯೋಃ ಪ್ರಭಂಜನಾಭಿಧಾಯುಜಾ ॥

---

4 ಇಂತಹುದೇ ಶ್ಲೋಕ ಪಂಚರಾತ್ರಾಂತರ್ಗತವಾದ ಶ್ರೀನಿವಾಸಮಾಹಾತ್ಮ್ಯೆಯಲ್ಲೂ ಇದೆ.

2 ಕೆಲವು ಹಸ್ತಪ್ರತಿಗಳಲ್ಲಿ ಈ ಕೆಳಗಿನ ಶ್ಲೋಕಗಳು ಸಹ ಉಂಟು :
ಮಧ್ವಸ್ಯ ದ್ವೇಷಿಣಂ ದೃಷ್ಟ್ವಾ ವಾಚಾ ತು ನಮ ಇತ್ಯಪಿ ।
ಬ್ರಾಹ್ಮಣಸ್ಯ ಹಿ ಚ ಜಿಹ್ವಾಂ ಹಿ ಛಿತ್ವಾ ಸೂರ್ಯಂ ವಿಲೋಕಯೇತ್ ॥
ಮಧ್ವಸ್ಯ ದ್ವೇಷಿಣೋ ಪಾಪ್ರ ಮನಸಾ ನಮ ಇತ್ಯಪಿ ।
ಬ್ರಾಹ್ಮಣಸ್ಯ ತು ಕಂಠಂ ತು ಛಿತ್ವಾ ಮೋದೇ ಸಜ್ಜನಃ ॥
ದೀಪದಾನಂ ರೂಪ್ಯದಾನಮನ್ನದಾನಂ ತಥೈವ ಚ ।
ವ್ಯರ್ಥಂ ಭವತಿ ತತ್ಸರ್ವಂ ಶ್ರೀಮಧ್ವದ್ವೇಷಿವಂದನಾತ್ ॥